ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟಿ

# ಜನತಾ ವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಗುರುವಾರ, ನವೆಂಬರ್ 11, 2021

ಸಂಪುಟ : 48 ಸಂಚಿಕೆ : 180 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 4 ರೂ : 4.00 www.janathavani.com janathavani@mac.com


## ಆನ್‌ಲೈನ್ ಭಾವನೆಗಳೊಂದಿಗೆ ಆಡುವುದೇ '100'

ದಾವಣಗೆರೆ, ನ.10 – ಮೊಬೈಲ್‌ಗಳಿಂದಾಗಿ ಕುಟುಂಬದ ಸದಸ್ಯರು ಮುಖ ಕೊಟ್ಟು ಮಾತನಾಡದ ಪರಿಸ್ಥಿತಿ ಮನೆ ಮನೆಗಳಲ್ಲಿದೆ. ಆನ್‌ಲೈನ್ ಭಾವನೆಗಳ ಜೊತೆ ಯಾವ ರೀತಿ ಆಟ ಆಡುತ್ತದೆ ಎಂಬುದನ್ನು '100' ಚಿತ್ರದ ಮೂಲಕ ತೋರಿಸಲಾಗಿದೆ ಎಂದು ಚಿತ್ರನಟ ಹಾಗೂ ನಿರ್ದೇಶಕ ರಮೇಶ್ ಅರವಿಂದ್ ತಿಳಿಸಿದ್ದಾರೆ.

ಚಿತ್ರದ ಪ್ರಚಾರಕ್ಕಾಗಿ ಕರೆಯಲಾಗಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡುತ್ತಿದ್ದ ಅವರು, ಜನರ ಕೈಲಿ ಮೊಬೈಲ್ ಬಂದ ಮೇಲೆ ಪ್ರಪಂಚ ನೋಡುವುದೇ ಕಡಿಮೆಯಾಗಿದೆ. ಮೊಬೈಲ್ ಹಾಗೂ ಆನ್‌ಲೈನ್ ಜಗತ್ತು ತಪ್ಪಾದ ಪ್ರಭಾವ ಬೀರಿದಾಗ ಏನಾಗುತ್ತದೆ ಎಂಬುದನ್ನು ಈ ಚಿತ್ರದಲ್ಲಿ ತೋರಿಸಲಾಗಿದೆ ಎಂದವರು ಹೇಳಿದ್ದಾರೆ.

ರಚಿತಾ ರಾಮ್, ಪೂರ್ಣ, ವಿಶ್ವಕರ್ಣ, ಮಾಲತಿ ಸುಧೀರ್ ಮುಂತಾದವರು ನಟಿಸಿರುವ ಈ ಚಿತ್ರ ಬರುವ ನ.19ರಂದು ಚಿತ್ರಮಂದಿರಗಳಿಗೆ ಬರಲಿದೆ. ಈ ಚಿತ್ರವನ್ನು ತೆಲುಗಿಗೆ ಡಬ್ (3ನೇ ಪುಟಕ್ಕೆ)



ನ. 19ರಂದು ಬಿಡುಗಡೆಯಾಗಲಿರುವ ಚಿತ್ರದ ಬಗ್ಗೆ ನಟ ರಮೇಶ್

### ಚಿತ್ರಮಂದಿರಗಳೇ ಮುಖ್ಯ ಚಕ್ರ

" ಗಡಿಯಾರದಲ್ಲಿ ಹಲವು ಚಕ್ರಗಳಿರುತ್ತವೆ. ಅದರಂತೆ ಚಿತ್ರರಂಗದಲ್ಲೂ ಹಲವಾರು ಚಕ್ರಗಳಿದ್ದರೂ, ಚಿತ್ರಮಂದಿರಗಳೇ ಮುಖ್ಯ ಚಕ್ರ. ಈ ಚಕ್ರ ತಿರುಗಿದರೇನೇ ಇಡೀ ಚಿತ್ರರಂಗ ಮುಂದೆ ಸಾಗುತ್ತದೆ ಎಂದು ನಟ ರಮೇಶ್ ಅರವಿಂದ್ ವಿಶ್ಲೇಷಿಸಿದ್ದಾರೆ.

ಕೊರೊನಾ ಕಾರಣದಿಂದ ಬಂದ್ ಆಗಿದ್ದ ಚಿತ್ರಮಂದಿರಗಳು ಈಗ ಪೂರ್ಣ ಪ್ರಮಾಣದಲ್ಲಿ ಮತ್ತೆ ತೆರೆದಿವೆ. ಇದರಿಂದ ಚಿತ್ರರಂಗದ ಎಲ್ಲ ಚಕ್ರಗಳು ಮತ್ತೆ ಓಡುವ ವಿಶ್ವಾಸ ಇದೆ ಎಂದರು.

# ದೆಹಲಿ ನಾಯಕರ ಅಂಗಳಕ್ಕೆ ಬಿಟ್‌ಕಾಯಿನ್ ಹಗರಣ

## ದೊಡ್ಡ ವ್ಯವಹಾರಗಳನ್ನು ಹ್ಯಾಕ್ ಮಾಡಿರುವ ಕುರಿತು ತನಿಖೆ

ಬೆಂಗಳೂರು, ನ. 10 – ಬಿಟ್‌ಕಾಯಿನ್ ಹಗರಣ ಈಗ ದೆಹಲಿ ಹಂತದವರೆಗೆ ತಲುಪಿದ್ದು, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ರಾಷ್ಟ್ರೀಯ ನಾಯಕರ ಭೇಟಿ ಮಾಡಿ ವಿವರ ನೀಡಲಿದ್ದಾರೆ.

ದೆಹಲಿ ಪ್ರವಾಸ ಕೈಗೊಂಡಿರುವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಷಾ ಹಾಗೂ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ನಡ್ಡಾ ಅವರ ಭೇಟಿಗೆ ಸಮಯಾವಕಾಶ ಕೋರಿದ್ದಾರೆ.

ಬಹುತೇಕ ನಾಳೆ ಪ್ರಧಾನಿಯವರನ್ನು ಭೇಟಿಯಾಗಲಿರುವ ಮುಖ್ಯಮಂತ್ರಿಯವರು ಬಿಟ್ ಕಾಯಿನ್ ಪ್ರಕರಣಕ್ಕೆ ಸಂಬಂಧಿಸಿದಂತೆ ವಿವರಣೆ ನೀಡಲಿದ್ದಾರೆ ಎಂದು ಉನ್ನತ ಮೂಲಗಳು ತಿಳಿಸಿವೆ.

ಬಿಟ್ ಕಾಯಿನ್ ಹಗರಣದಲ್ಲಿ ಈ ಹಿಂದೆ ಉನ್ನತ ಸ್ಥಾನದಲ್ಲಿದ್ದವರ ಮಗ, ಈಗ ಉನ್ನತ ಸ್ಥಾನದಲ್ಲಿರುವವರ ಮಗ, ರಾಷ್ಟ್ರೀಯ ಪಕ್ಷವೊಂದರ ಅಧ್ಯಕ್ಷ, ಹಲವು ಅಧಿಕಾರಿಗಳು ಪಾಲುದಾರರಾಗಿದ್ದಾರೆ (2ನೇ ಪುಟಕ್ಕೆ)

## ಹೊನ್ನಾಳಿ: ಭತ್ತ ಖರೀದಿ ಕೇಂದ್ರಕ್ಕೆ ರೈಸ್ ಮಿಲ್ ಮಾಲೀಕರ ಒತ್ತಾಯ

ಹೊನ್ನಾಳಿ, ನ.10- ಭತ್ತ ಖರೀದಿ ಕೇಂದ್ರವನ್ನು ತೆರೆಯುವ ಮೂಲಕ ರೈತರಿಗೆ ಅನುಕೂಲ ಮಾಡಿಕೊಡಬೇಕು ಎಂದು ರೈಸ್‌ಮಿಲ್ ಮಾಲೀಕರ ಸಂಘದ ರಾಜ್ಯ ನಿರ್ದೇಶಕ, ಕೆಪಿಸಿಸಿ ಹಿಂದುಳಿದ ವರ್ಗಗಳ ರಾಜ್ಯ ಉಪಾಧ್ಯಕ್ಷ ಎಚ್.ಎ. ಉಮಾಪತಿ ಹೇಳಿದರು.

ಆಹಾರ ಮತ್ತು ನಾಗರಿಕ ಪೂರೈಕೆ ಖಾತೆ ಸಚಿವ ಉಮೇಶ್ ಕತ್ತಿ ಅವರನ್ನು ಬೆಂಗಳೂರಿನ ವಿಧಾನಸೌಧದಲ್ಲಿ ಮಂಗಳವಾರ ರಾತ್ರಿ ಭೇಟಿ ಮಾಡಿ, ಈ ಕುರಿತ ಮನವಿ ಪತ್ರ ಸಲ್ಲಿಸಿ ಅವರು ಮಾತನಾಡಿದರು.

ಮುಕ್ತ ಮಾರುಕಟ್ಟೆಯಲ್ಲಿ ಭತ್ತಕ್ಕೆ ಕಡಿಮೆ ಬೆಲೆ ಇದೆ. ಈ ಕಾರಣಕ್ಕೆ ರೈತರು ಬೆಳೆದ ಭತ್ತದ ಬೆಳೆಗೆ ಹೆಚ್ಚಿನ ಬೆಲೆ ಲಭಿಸುತ್ತಿಲ್ಲ. ಹೊನ್ನಾಳಿಯಲ್ಲಿ ಶೀಘ್ರವೇ ಭತ್ತ ಖರೀದಿ ಕೇಂದ್ರವನ್ನು ತೆರೆಯಬೇಕು. ರೈತರಿಗೆ ಬೆಲೆ ಖಾತ್ರಿ ಒದಗಿಸಬೇಕು ಎಂದು ವಿನಂತಿಸಿದರು.

ಭತ್ತ ಬೆಳೆಯಲು ಬಿತ್ತನೆ ಬೀಜ, ರಸಗೊಬ್ಬರ, ಕೂಲಿ ಕಾರ್ಮಿಕರು-ಯಂತ್ರಗಳ ವೆಚ್ಚ ಸೇರಿದಂತೆ ವಿವಿಧ ರೀತಿಯ ಖರ್ಚುಗಳು ಅತಿ ಹೆಚ್ಚಾಗಿವೆ. ಆದರೆ, ರೈತ ಬೆಳೆದ ಭತ್ತಕ್ಕೆ ಮಾತ್ರ ಸ್ಪರ್ಧಾತ್ಮಕ ಬೆಲೆ ಲಭಿಸುತ್ತಿಲ್ಲ. ಇದರಿಂದಾಗಿ ರೈತರು ತೀವ್ರ ನೋವು ಅನುಭವಿಸುವಂತಾಗಿದೆ. ಸರ್ಕಾರದ ವತಿಯಿಂದ ಭತ್ತ ಖರೀದಿ ಕೇಂದ್ರ ತೆರೆದು, ರೈತರಿಗೆ ವೈಜ್ಞಾನಿಕ ಬೆಲೆ ನೀಡಬೇಕು. ತನ್ಮೂಲಕ ರೈತರ ನೆರವಿಗೆ ಧಾವಿಸಬೇಕು ಎಂದರು.

ತುಂಗಾ ಹಾಗೂ (2ನೇ ಪುಟಕ್ಕೆ)

## ಎಥೆನಾಲ್ ಬೆಂಬಲ ಬೆಲೆ ಹೆಚ್ಚಳ

ನವದೆಹಲಿ, ನ. 10 – ಪೆಟ್ರೋಲ್‌ನಲ್ಲಿ ಮಿಶ್ರಣ ಮಾಡಲು ಕಬ್ಬಿನಿಂದ ಪಡೆಯುವ ಎಥೆನಾಲ್‌ಗೆ ನೀಡುವ ಬೆಲೆಯನ್ನು ಕೇಂದ್ರ ಸರ್ಕಾರ ಲೀಟರ್‌ಗೆ 1.47 ರೂ.ಗಳಷ್ಟು ಹೆಚ್ಚಿಸಿದೆ. ಬರುವ ಡಿಸೆಂಬರ್‌ನಿಂದ ಬೆಲೆ ಹೆಚ್ಚಳವಾಗಲಿದೆ. ಎಥೆನಾಲ್‌ನಲ್ಲಿ ಪೆಟ್ರೋಲ್ ಬೆರೆಸುವುದರಿಂದ ಆಮದು ಹೊರೆ ಕಡಿಮೆಯಾಗುವ ಜೊತೆಗೆ ಕಬ್ಬು ಬೆಳೆಯುವ ರೈತರು ಹಾಗೂ ಸಕ್ಕರೆ ಕಾರ್ಖಾನೆಗಳಿಗೆ ನೆರವಾಗಲಿದೆ.

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ಕರೆಯಲಾದ ಕೇಂದ್ರ ಸಂಪುಟದ ಆರ್ಥಿಕ ವ್ಯವಹಾರಗಳ ಸಮಿತಿ ಸಭೆಯಲ್ಲಿ ಎಥೆನಾಲ್ ಬೆಲೆ ಹೆಚ್ಚಿಸುವ ನಿರ್ಧಾರ ತೆಗೆದುಕೊಳ್ಳಲಾಗಿದೆ.

ಈ ಬಗ್ಗೆ ವಿವರ ನೀಡಿರುವ ಕೇಂದ್ರ ಮಾಹಿತಿ ಮತ್ತು ಪ್ರಸಾರ ಸಚಿವ ಅನುರಾಗ್ ಠಾಕೂರ್, ಕಬ್ಬಿನ ರಸದಿಂದ ಪಡೆಯಲಾದ ಎಥೆನಾಲ್‌ಗೆ ನೀಡುವ ಬೆಲೆಯನ್ನು ಈಗಿರುವ 62.65 ರೂ.ಗಳಿಂದ (2ನೇ ಪುಟಕ್ಕೆ)

## ಹತ್ತಿ ಬೆಂಬಲ ಬೆಲೆಗಾಗಿ 17,408 ಕೋಟಿ ರೂ.

ನವದೆಹಲಿ, ನ 10 – ಭಾರತೀಯ ಹತ್ತಿ ನಿಗಮಕ್ಕೆ 17,408.85 ಕೋಟಿ ರೂ.ಗಳ ಬೆಲೆ ಬೆಂಬಲ ಬದ್ಧತೆಗಾಗಿ ಕೇಂದ್ರ ಸರ್ಕಾರ ಅನುಮೋದನೆ ನೀಡಿದೆ.

ಪ್ರಧಾನ ಮಂತ್ರಿ ನರೇಂದ್ರ ಮೋದಿ ನೇತೃತ್ವದಲ್ಲಿ ನಡೆದ ಕೇಂದ್ರ ಸಂಪುಟದ ಆರ್ಥಿಕ ವ್ಯವಹಾರಗಳ ಸಮಿತಿ ಸಭೆಯಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ.

2014-15 ರಿಂದ 2020-21ರ ನಡುವೆ ಕನಿಷ್ಠ ಬೆಂಬಲ ಬೆಲೆಗಾಗಿ ಹತ್ತಿ ನಿಗಮ ಮಾಡಿರುವ ವೆಚ್ಚ ಭರಿಸಲು ಈ ಕ್ರಮ ತೆಗೆದುಕೊಳ್ಳಲಾಗಿದೆ.

## ಸಂಸದರ ನಿಧಿ ಪುನರಾರಂಭ

ನವದಹಲಿ, ನ. 10 -ಸಂಸದರ ಕ್ಷೇತ್ರಾಭಿವೃದ್ಧಿ ನಿಧಿ ಯನ್ನು ಪುನರಾರಂಭಿಸಲು ಕೇಂದ್ರ ಸಂಪುಟ ನಿರ್ಧರಿಸಿದೆ. 2021-22ರ ಸಾಲಿನ ಉಳಿದ ಅವಧಿ ಗೆ ಪ್ರತಿ ಸಂಸದರು ತಲಾ 2 ಕೋಟಿ ರೂ. ಪಡೆಯಲಿದ್ದಾರೆ. ಮುಂದಿನ ವರ್ಷದಿಂದ ಕ್ಷೇತ್ರಾಭಿವೃದ್ಧಿ ನಿಧಿಯಾಗಿ 5 ಕೋಟಿ ರೂ. (2ನೇ ಪುಟಕ್ಕೆ)


॥ಶ್ರೀ ರೇಣುಕಾದೇವಿ ಪ್ರಸನ್ನ॥ ॥ಶ್ರೀ ಮೈಲಾರಲಿಂಗೇಶ್ವರ ಪ್ರಸನ್ನ॥ ॥ಶ್ರೀ ಆಂಜನೇಯ ಸ್ವಾಮಿ ಪ್ರಸನ್ನ॥

### ಕೈಲಾಸ ಸಮಾರಾಧನೆ ಆಹ್ವಾನ



ಆತ್ಮೀಯರೇ, ದಿನಾಂಕ : 30.10.2021 ನೇ ಶನಿವಾರ ಮಧ್ಯಾಹ್ನ 12.20ಕ್ಕೆ ನಮ್ಮ ಪೂಜ್ಯ ತಾಯಿಯವರಾದ

ಶ್ರೀಮತಿ ಪೂಜ್ಯ ಗಂಗಮ್ಮನವರು

(ದಿ॥ ಶ್ರೀ ಹನುಮಂತಪ್ಪ ಇವರ ಧರ್ಮಪತ್ನಿ)

ಇವರು ದೈವಾಧೀನರಾದ ಪ್ರಯುಕ್ತ ಮೃತರ ಆತ್ಮ ಶಾಂತಿಗಾಗಿ 'ಕೈಲಾಸ ಸಮಾರಾಧನೆ'ಯನ್ನು

ದಿನಾಂಕ : 11.11.2021ನೇ ಗುರುವಾರ ಬೆಳಿಗ್ಗೆ 10.30.ಕ್ಕೆ ದಾವಣಗೆರೆಯ 1ನೇ ಮೇನ್ 12ನೇ ಕ್ರಾಸ್, ವಿನೋಬನಗರ ಇಲ್ಲಿರುವ ಮೃತರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು : ಶ್ರೀ ಫಕ್ಕೀರಪ್ಪ ಮತ್ತು ಶ್ರೀ ಹೆಚ್. ಸುರೇಶ್ ಮತ್ತು ಮಕ್ಕಳು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಭಕ್ತ ವೃಂದದವರು ಮತ್ತು ಬಂಧು-ಮಿತ್ರರು, ಫೋ. : 94484 15578

ವಿ.ಸೂ. ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.


## 19 ರಂದು ಸಾಧು ಸದ್ಧರ್ಮ ಸಮಾಜದ ಸಭೆ

ಸಿರಿಗೆರೆ, ನ.10- ನ.7ರ ಭಾನುವಾರ ಪತ್ರಿಕೆ ಹಾಗೂ ಮಾಧ್ಯಮ ಗಳಲ್ಲಿ ಸಿರಿಗೆರೆ ಶ್ರೀ ತರಳಬಾಳು ಬೃಹನ್ಮಠ ಹಾಗೂ ಸಮಾಜದ ಗೌರವ, ಘನತೆಗೆ ಧಕ್ಕೆ ಬರುವಂತಹ ಸುಳ್ಳು ಆರೋಪ ಮತ್ತು ನಿಂದನೆಯ ಮಾತುಗಳನ್ನು ಆಡಿರುವ ಹಿನ್ನೆಲೆಯಲ್ಲಿ ಇದೇ ನ. 19ರ ಶುಕ್ರವಾರ ಬೆಳಗ್ಗೆ 11 ಗಂಟೆಗೆ ಸಿರಿಗೆರೆಯ ಶ್ರೀ ಗುರುಶಾಂತೇಶ್ವರ ದಾಸೋಹ ಮಂಟಪದಲ್ಲಿ ಶ್ರೀ ತರಳಬಾಳು ಜಗದ್ಗುರು ಡಾ॥ ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮೀಜಿ ಅವರ ದಿವ್ಯಸಾನ್ನಿಧ್ಯದಲ್ಲಿ ಸಮಾಜದ ಸಭೆಯನ್ನು ಕರೆಯಲಾಗಿದೆ.

ಶ್ರೀಮತ್ ಸಾಧು ಸದ್ಧರ್ಮ ವೀರಶೈವ ಸಂಘದ ಎಲ್ಲಾ ತಾಲ್ಲೂಕುಗಳ ಅಧ್ಯಕ್ಷರು, ಪದಾಧಿಕಾರಿಗಳು, ಸಮಾಜದ ಹಿರಿಯರು ಮತ್ತು ಯುವಕರು ತಪ್ಪದೇ ಈ ಸಭೆಗೆ ಆಗಮಿಸಬೇಕಾಗಿ ಸಂಘದ ಅಧ್ಯಕ್ಷ ಕೆ.ಆರ್. ಜಯದೇವಪ್ಪ ಕೋರಿದ್ದಾರೆ.

## ಆಯುಷ್ಮಾನ್ ಭಾರತ್ ನೋಂದಣಿಗೆ ಸೂಚನೆ

ನವದೆಹಲಿ, ನ. 10 – ಆಸ್ಪತ್ರೆ, ಪ್ರಯೋಗಾಲಯ ಹಾಗೂ ಫಾರ್ಮಾಗಳಲ್ಲಿ ಕಾರ್ಯ ನಿರ್ವಹಿಸುವ ಎಲ್ಲರೂ ಹಾಗೂ ವೈದ್ಯರು ಆಯುಷ್ಮಾನ್ ಭಾರತ್ ಡಿಜಿಟಲ್ ಮಿಷನ್ ನಲ್ಲಿ ನೋಂದಾಯಿಸಿಕೊಳ್ಳುವಂತೆ ಕೇಂದ್ರ ಸರ್ಕಾರ ತಿಳಿಸಿದೆ.

ಎಲ್ಲಾ ಕೇಂದ್ರ ಇಲಾಖೆಗಳ ಕಾರ್ಯದರ್ಶಿಗಳಿಗೆ ಪತ್ರ ಬರೆದಿರುವ ಆರೋಗ್ಯ ಕಾರ್ಯದರ್ಶಿ ರಾಜೇಶ್ ಭೂಷಣ್, ಡಿಜಿಟಲ್ ಆರೋಗ್ಯ ದಾಖಲೆಗಳನ್ನು ರೂಪಿಸುವ ಸಲುವಾಗಿ ನೋಂದಣಿ ಅಗತ್ಯವಾಗಿದೆ ಎಂದು ತಿಳಿಸಿದ್ದಾರೆ. ಆರೋಗ್ಯ ಸೇವೆ ಒದಗಿಸುವ ಎಲ್ಲರೂ (2ನೇ ಪುಟಕ್ಕೆ)




ಶ್ರೀಮದುಜ್ಜಯಿನಿ ಸದ್ಧರ್ಮ ಸಿಂಹಾಸನಾಧೀಶ ಶ್ರೀ ತರಳಬಾಳು ಜಗದ್ಗುರು ಲಿಂಗೈಕ್ಯ ೧೧೦೮ ಡಾ॥ ಗುರುಶಾಂತರಾಜ ದೇಶಿಕೇಂದ್ರ ಮಹಾಸ್ವಾಮಿಗಳವರು





ಶ್ರೀಮದುಜ್ಜಯಿನಿ ಸದ್ಧರ್ಮ ಸಿಂಹಾಸನಾಧೀಶ ಶ್ರೀ ತರಳಬಾಳು ಜಗದ್ಗುರು ಲಿಂಗೈಕ್ಯ ೧೧೦೮ ಶಿವಕುಮಾರ ಶಿವಾಚಾರ್ಯ ಮಹಾಸ್ವಾಮಿಗಳವರು

### ಶ್ರೀಮತ್ ಸಾಧು ಸದ್ಧರ್ಮ ವೀರಶೈವ ಸಂಘ (ರಿ)

ಸಿರಿಗೆರೆ/ದಾವಣಗೆರೆ.

**ಮೀಟಿಂಗ್ ನೋಟೀಸ್**

ದಿನಾಂಕ 7.11.2021 ರಂದು ಭಾನುವಾರ ಪತ್ರಿಕೆ ಹಾಗೂ ಮಾಧ್ಯಮಗಳಲ್ಲಿ ಕೆಲವರು ನಮ್ಮ ಮಠ ಮತ್ತು ಸಮಾಜದ ಗೌರವ, ಘನತೆಗೆ ಧಕ್ಕೆ ಬರುವಂತಹ ಸುಳ್ಳು ಆರೋಪ ಮತ್ತು ನಿಂದನೆಯ ಮಾತುಗಳನ್ನು ಆಡಿರುವ ಹಿನ್ನೆಲೆಯಲ್ಲಿ ದಿನಾಂಕ 19.11.2021 ರಂದು ಶುಕ್ರವಾರ ಬೆಳಗ್ಗೆ 11 ಗಂಟೆಗೆ ಸಿರಿಗೆರೆಯ ಶ್ರೀ ಗುರುಶಾಂತೇಶ್ವರ ದಾಸೋಹ ಮಂಟಪದಲ್ಲಿ ಶ್ರೀ ತರಳಬಾಳು ಜಗದ್ಗುರು ಡಾ॥ ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರ ದಿವ್ಯಸಾನ್ನಿಧ್ಯದಲ್ಲಿ ಸಮಾಜದ ಸಭೆಯನ್ನು ಕರೆಯಲಾಗಿದೆ.

ಎಲ್ಲಾ ತಾಲ್ಲೂಕುಗಳ ಅಧ್ಯಕ್ಷರು, ಪದಾಧಿಕಾರಿಗಳು, ಸಮಾಜದ ಹಿರಿಯರು ಮತ್ತು ಯುವಕರು ತಪ್ಪದೇ ಈ ಸಭೆಗೆ ಆಗಮಿಸಬೇಕಾಗಿ ಕೋರಿದೆ.

ಕೆ.ಆರ್. ಜಯದೇವಪ್ಪ
ಅಧ್ಯಕ್ಷರು, ಶ್ರೀಮತ್ ಸಾಧು ಸದ್ಧರ್ಮ ವೀರಶೈವ ಸಂಘ (ರಿ) ಸಿರಿಗೆರೆ/ದಾವಣಗೆರೆ.



॥ ಶ್ರೀ ನಾರದ ಮುನಿ ಪ್ರಸನ್ನ ॥

### ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ



ದಾವಣಗೆರೆ ತಾಲ್ಲೂಕು ಅಣಬೇರು ಗ್ರಾಮದ ವಾಸಿ ಕೋಟೆಹಾಳ್ ಶ್ರೀ ಕೆ.ಎಂ. ನಾರಪ್ಪ, ನಿವೃತ್ತ ಪಶು ವೈದ್ಯಕೀಯ ಸಹಾಯಕರು ಹಾಗೂ ಸಹೋದರರು ಇವರು ಮಾಡುವ ವಿಜ್ಞಾಪನೆಗಳು. ದಿನಾಂಕ 8.11.2021ರ ಸೋಮವಾರ ಬೆಳಗಿನ ಜಾವ 1 ಗಂಟೆಗೆ ನನ್ನ ಧರ್ಮಪತ್ನಿ

ಕೋಟೆಹಾಳ್ ಶ್ರೀಮತಿ ಹಾಲಮ್ಮ

ಇವರು ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ 'ಕೈಲಾಸ ಶಿವಗಣಾರಾಧನೆ'ಯನ್ನು ದಿನಾಂಕ : 12.11.2021ನೇ ಶುಕ್ರವಾರ ಬೆಳಿಗ್ಗೆ 10 ಕ್ಕೆ ದಾವಣಗೆರೆ ತಾಲ್ಲೂಕು ಅಣಬೇರು ಗ್ರಾಮದ ಮೃತರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು : ಮೃತರ ಪತಿ : * ಕೋಟೆಹಾಳ್ ಶ್ರೀ ಕೆ.ಎಂ. ನಾರಪ್ಪ, ನಿವೃತ್ತ ಪಶು ವೈದ್ಯಕೀಯ ಸಹಾಯಕರು
* ಶ್ರೀಮತಿ ಬಸಮ್ಮ ಶ್ರೀ ಕೆ.ಎಂ. ಶೇಖರಪ್ಪ * ಶ್ರೀಮತಿ ಅನುಸೂಯಮ್ಮ ಶ್ರೀ ಕೆ.ಎಂ. ಪರಮೇಶ್ವರಪ್ಪ
* ಶ್ರೀಮತಿ ಶಿವರುದ್ರಮ್ಮ ಶ್ರೀ ಕೆ.ಎನ್. ಸಿದ್ದಪ್ಪ * ಶ್ರೀಮತಿ ವೀಣಾ ಎಸ್. ಶ್ರೀ ಕೆ.ಎನ್. ಬಸವರಾಜು
* ಕೋಟೆಹಾಳ್ ವಂಶಸ್ಥರು, ಅಣಬೇರು, ಕೋಗುಂಡಿ ಗೌಡ್ರ ವಂಶಸ್ಥರು ಹಾಗೂ ಬಂಧು-ಮಿತ್ರರು
ಮೊ. 98865-96905, 84970 17532, 87468 83930

ವಿ.ಸೂ. ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.



### ಅಭಿನಂದನೆಗಳು



ಇಂದು ಶುಭಾರಂಭ
ಜಾನ್ಸಿ ಕಿಯಾ
(ಹೊಸ ಬ್ರಾಂಡ್‌ನ ಸ್ಟೇಟ್ ಆಫ್ ಆರ್ಟ್ ಕಿಯಾ ಡೀಲರ್‌ಶಿಪ್)
ಜಾನ್ಸಿ ಆಟೋಮೋಟಿವ್ ಪ್ರೈ. ಲಿ., ಪ್ಲಾಟ್ ನಂ. 174/4, ನಂ. 11/1, ಹಳೇ ಪಿ.ಬಿ. ರೋಡ್, ದಾವಣಗೆರೆ - 577002.
ದಿನಾಂಕ : 11.11.2021, ಗುರುವಾರ, ಸಮಯ : ಬೆಳಿಗ್ಗೆ 10.30ಕ್ಕೆ.

S.R. ASSOCIATES
ENGINEERS & CONTRACTORS

ನೂತನ ಶೋ ರೂಂಗೆ ಶುಭಾಶಯಗಳು. ಜೊತೆಗೆ ಈ ಮಳಿಗೆಯನ್ನು ಅಲ್ಪಾವಧಿಯಲ್ಲೇ ಅತ್ಯುತ್ತಮವಾಗಿ ನಿರ್ಮಿಸಿರುವ ನಮ್ಮ ಆತ್ಮೀಯ ಸ್ನೇಹಿತರಾದ ದಾವಣಗೆರೆಯ ಎಸ್.ಆರ್. ಅಸೋಸಿಯೇಟ್ಸ್‌ನ ಇಂ॥ ಶಿವಕುಮಾರ್ ಬಿ.ಹೆಚ್. ಅವರಿಗೆ ಹೃದಯಪೂರ್ವಕ ಅಭಿನಂದನೆಗಳು ಮತ್ತು ಶೋ ರೂಂ ನಿರ್ಮಾಣಕ್ಕೆ ಪ್ರತ್ಯಕ್ಷ - ಪರೋಕ್ಷವಾಗಿ ಸಹಕರಿಸಿದ ಎಸ್.ಆರ್. ಅಸೋಸಿಯೇಟ್ಸ್‌ನ ಸಿಬ್ಬಂದಿ ವರ್ಗದವರಿಗೂ ಹೃತ್ಪೂರ್ವಕ ಧನ್ಯವಾದಗಳು.



✦ ಜೆ. ಈಶ್ವರ್‌ಸಿಂಗ್ ಕವಿತಾಳ, ಮಾಲೀಕರು, ಬಿಂದಾಸ್ ಗ್ರೂಪ್, ದಾವಣಗೆರೆ.
✦ ಡಾ॥ ಪ್ರವೀಣ್ ಅಂಬರ್‌ಕರ್, ✦ ಡಾ॥ ರುದ್ರೇಶ್ ಹೆಚ್.ಕೆ. ಅಶ್ವಿನಿ ಕ್ಲಿನಿಕ್
✦ ನವೀನ್ ದಿಬ್ಬಳ್ಳಿ, ಮಾಲೀಕರು, ಏರ್‌ಟೆಲ್ ಶೋ ರೂಂ
✦ ಚಿದಂಬರ ಜೋಷಿ, ಫೈನಾನ್ಷಿಯಲ್ ಅಡ್ವೈಜರ್ ✦ ಆರ್. ಕ್ಯೂಬ್ ಇಂಡಸ್ಟ್ರೀಸ್, ದಾವಣಗೆರೆ.
✦ ನಿರಂಜನ್ ಬಿ.ಎಂ. ಕರ್ನಾಟಕ ಇಂಜಿನಿಯರಿಂಗ್ ಕನ್ಸಲ್ಟೆನ್ಸಿ
✦ ಡಿ. ಮಂಜುನಾಥ, ಶ್ರೀನಿಧಿ ಮ್ಯಾಚಿಂಗ್ ಸೆಂಟರ್, ದಾವಣಗೆರೆ.
✦ ಸೋಮಶೇಖರ್ ಪವಾರ್, ರೇಣು ಪೇಂಟ್ಸ್, ✦ ಥಾಮಸ್ ಸಿ. ಕ್ರಿಸ್ ಎಲೆಕ್ಟ್ರಿಕಲ್ಸ್
✦ ಪೃಥ್ವಿ ಹೆಚ್.ಎಂ. ✦ ಸಾಗರ್ ಡಿ.ಎಸ್. ✦ ಶಶಾಂಕ್ ಜಿ.ಎಂ.
✦ ಪ್ರಸನ್ನ ಬಿ.ಎಸ್ ✦ ಕು॥ ಸರ್ವಮಂಗಳ ಬಿ.ಎಸ್.
✦ ಹೃತಿಕ್‌ಸಿಂಗ್ ಜೆ.ಇ. ✦ ಕು॥ ಹೃಷಿಕಸಿಂಗ್ ಜೆ.ಇ. ✦ ಕು॥ ಪಾವನಿ
ಬೂದ್ಯಾಳ್ ಮಠದ್ ವಂಶಸ್ಥರು, ಬ್ಯಾಡಗಿ. ಬ್ರೋನಿ ಮತ್ತು ಸ್ಯಾಂಡಿ,
ಕುಂದುವಾಡ ಕೆರೆ ವಾಯುವಿಹಾರ ಬಳಗ ಮತ್ತು ಟೀ ಲಾಂಜ್ ಗೆಳೆಯರ ಬಳಗ



ಜೀವನ ಪ್ರಮಾಣ ಪತ್ರ, (Life Certificate) ಪಾಸ್ ಪೋರ್ಟ್, ಪಾನ್ ಕಾರ್ಡ್, ಜಾತಿ, ಆದಾಯ ಪ್ರಮಾಣ ಪತ್ರಕ್ಕೆ ಸಂಪರ್ಕಿಸಿ : 98449 69738

**ಮನೆಯ ಪೇಂಟಿಂಗ್**
ಹೊಸ ಮತ್ತು ಹಳೆ ಮನೆಗಳಿಗೆ. ಆಫೀಸ್, ಕಮರ್ಷಿಯಲ್ ಬಿಲ್ಡಿಂಗ್ ಫ್ಯಾಕ್ಟರಿ, ಗೋಡೌನ್‌ಗಳಿಗೆ ಕಡಿಮೆ ಖರ್ಚಿನಲ್ಲಿ ಗುಣಮಟ್ಟದ ಪೇಂಟಿಂಗ್ ಮಾಡಿಕೊಡಲಾಗುವುದು.
Mob: 95913 10082

**ಮನೆ ಬಾಡಿಗೆಗಿದೆ**
ಸುಸಜ್ಜಿತ, ವಾಸ್ತು ಪ್ರಕಾರ ಉತ್ತರಾಭಿಮುಖವಾಗಿರುವ ವಿಶಾಲವಾದ ಹಾಲ್, ಕಿಚನ್, 2 ಮತ್ತು 3 ಬೆಡ್ ರೂಂ, ಪೂಜಾ ರೂಂ ಇರುವ ಏಳೂವರೆ ಚದುರವುಳ್ಳ, 24 ಗಂಟೆ ನೀರಿನ ವ್ಯವಸ್ಥೆಯಿರುವ ಮನೆ ದೇವರಾಜ ಅರಸು ಬಡಾವಣೆ 'ಎ' ಬ್ಲಾಕ್, ಅನ್ನಪೂರ್ಣೇಶ್ವರಿ ದೇವಸ್ಥಾನದ ಹತ್ತಿರ ಬಾಡಿಗೆಗಿದೆ. ಸಂಪರ್ಕಿಸಿ.
79750 35395

**ಶ್ರೀ ದುರ್ಗಾಂಬಿಕ ಹೋಂ ಕೇರ್ ಸರ್ವೀಸ್**
ನಮ್ಮಲ್ಲಿ ವಯೋವೃದ್ದರನ್ನು ನೋಡಿಕೊಳ್ಳಲು ಆಯಾಗಳನ್ನು ಕಳುಹಿಸುತ್ತೇವೆ. ವಯೋವೃದ್ದರನ್ನು ನೋಡಿಕೊಳ್ಳಲು ಯುವಕ, ಯುವತಿಯರು ಬೇಕಾಗಿದ್ದಾರೆ. (ಊಟ, ವಸತಿ ವ್ಯವಸ್ಥೆ ಇರುತ್ತದೆ.)
ಫೋ. : 96062 82814

**ಸೈಟುಗಳು ಮಾರಾಟಕ್ಕಿವೆ**
ವಿದ್ಯಾರ್ಥಿ ಭವನ ಹತ್ತಿರ ಹರ್ಷ ಬಾರ್ ಹಿಂಭಾಗದಲ್ಲಿ 30×40 South, 30×40 Corner, 30×40, 30×40 South ಅಕ್ಕ-ಪಕ್ಕ
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

ವಿದ್ಯಾನಗರ ದಾಟಿ ಹೊಸ ಬನಶಂಕರಿ ಲೇಔಟ್‌ನಲ್ಲಿ ಸೈಟುಗಳು ಮಾರಾಟಕ್ಕಿವೆ. 30×50 East, 30×40 West, 30×40 west ಅಕ್ಕ-ಪಕ್ಕ 30×50, 30×50 west ಅಕ್ಕ-ಪಕ್ಕ
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಬೇಕಾಗಿದ್ದಾರೆ**
ಮಹಿಳಾ ಕಂಪ್ಯೂಟರ್ ಆಪರೇಟರ್ ಬೇಕಾಗಿದ್ದಾರೆ.
91108 98377

**ಡೆಲಿವರಿ ಬಾಯ್ಸ್ ಬೇಕಾಗಿದ್ದಾರೆ**
ಹೋಟೆಲ್ ಕೆಲಸಕ್ಕೆ ಅನುಭವವುಳ್ಳ ಡೆಲಿವರಿ ಬಾಯ್ಸ್ ಬೇಕಾಗಿದ್ದಾರೆ. ಉಚಿತ ಊಟ, ವಸತಿ ಹಾಗೂ ರೂ. 9000 ಸಂಬಳ + ಕಮೀಷನ್ ನೀಡಲಾಗುವುದು. Calling Timings 11.30 am 1.30 pm
98863 14000
70224 60137

**ಮನೆ ಬೇಕಾಗಿದೆ**
4 ಬೆಡ್ ರೂಂ ಮತ್ತು ಫರ್ನೀಚರ್ಸ್ ಹೊಂದಿರುವ ಮನೆ ಬಾಡಿಗೆಗೆ ಅಥವಾ ಲೀಸ್‌ಗೆ ಬೇಕಾಗಿದೆ. ಸಂಪರ್ಕಿಸಿ :
78996 83444
77956 44408

**ಕೆಲಸಕ್ಕೆ ಬೇಕಾಗಿದ್ದಾರೆ**
ಮೆಡಿಕಲ್ ಶಾಪ್‌ನಲ್ಲಿ ಕೆಲಸ ಮಾಡಲು ಅನುಭವವಿರುವವರು ಬೇಕಾಗಿದ್ದಾರೆ.
97434 47076
70192 49897

**ತಕ್ಷಣ ಬೇಕಾಗಿದ್ದಾರೆ**
ಮಹಿಳಾ ಅಭ್ಯರ್ಥಿಗಳು ತಕ್ಷಣ ಬೇಕಾಗಿದ್ದಾರೆ.
ವಿದ್ಯಾರ್ಹತೆ: SSLC/PUC/Degree
97428 29076
93803 89236

**ಬೇಕಾಗಿದ್ದಾರೆ**
ಔಷಧಿ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ.
ಸಂಪರ್ಕಿಸಿ:
ಅಮರಾವತಿ ಹಾಲಪ್ಪ
98454 84076

**ಮನೆ ಬಾಡಿಗೆಗೆ, ಲೀಸ್‌ಗೆ ಇದೆ**
ಶಕ್ತಿನಗರದಲ್ಲಿ ಸಿಂಗಲ್ ಬೆಡ್ ರೂಂ ಹೊಂದಿರುವ ಮನೆ ಬಾಡಿಗೆಗೆ, ಲೀಸ್‌ಗೆ ದೊರೆಯುತ್ತದೆ.
94484 39639 / 63665 96479

**ಶಿಕ್ಷಕಿಯರು ಬೇಕಾಗಿದ್ದಾರೆ**
1) DEd/BEd/NTC : 01
2) BA/B.Com/B.Sc.: 01
ನಿಸರ್ಗ ಕಾನ್ವೆಂಟ್, HKR ಸರ್ಕಲ್ ಹತ್ತಿರ, ನಿಟುವಳ್ಳಿ ಬ್ರಾಂಚ್, ದಾವಣಗೆರೆ
8971632458, 9844443374, 9986226454

**ತಕ್ಷಣ ಬೇಕಾಗಿದ್ದಾರೆ**
DTDC ಕೋರಿಯರ್‌ನಲ್ಲಿ Part Time ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ವಯೋಮಿತಿ: 20 ರಿಂದ 28 ವರ್ಷದ ಒಳಗೆ ಇರಬೇಕು. ಸಮಯ: ಸಂಜೆ 4.30 ರಿಂದ
97385 23711

**WANTED**
Required Male Office Assistant
ANDANUR CHITS (R)
Ram & co Circle Davanagere

**WANTED**
SALES MAN / DELIVERY MAN
apply or mail your bio data to
PARIMALA COFFEE CO
MANDIPET, DAVANGERE
MAIL: info@parimalacoffee.com

**ತಕ್ಷಣ ಬೇಕಾಗಿದ್ದಾರೆ**
ಸ್ಯಾಮ್ಸನ್ ಡಿಸ್ಟಿಲರೀಸ್, ದುಗ್ಗಾವತಿ ಹಾಗೂ SS ಆಸ್ಪತ್ರೆ, ಬಾಪೂಜಿ ಆಸ್ಪತ್ರೆ ಹಾಗೂ ದಾವಣಗೆರೆ ಸುತ್ತಮುತ್ತಲು 8 ಗಂಟೆ ಹಾಗೂ 12 ಗಂಟೆ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್ಸ್ ತಕ್ಷಣ ಬೇಕಾಗಿದ್ದಾರೆ. ESI-PF ಸೌಲಭ್ಯ ಇರುತ್ತದೆ.
ಅಸೋಸಿಯೇಟೆಡ್ ಎಂಟರ್ ಪ್ರೈಸಸ್, ದಾವಣಗೆರೆ.
99169 29713, 90605 45500, 97390 89022

**WANTED TEACHERS**
We r looking for qualified pre- school and primary class teachers ( LKG, UKG 1st to 5th std). English fluency is must
Contact with your bio data
96060-75754

**ವಿಚಾರಿಸಿರಿ**
ಹೊಲಕ್ಕೆ ಮತ್ತು ತೋಟಕ್ಕೆ ಉಪಯೋಗವಾಗುವಂತಹ ಬೂದಿ ಮತ್ತು ಇದ್ದಿಲು ನಮ್ಮಲ್ಲಿ ಉಚಿತವಾಗಿ ಲಭ್ಯವಿದೆ.
98452 46944

**ಬೇಕಾಗಿದ್ದಾರೆ**
ಆಫೀಸ್ ಬಾಯ್ ಕೆಲಸಕ್ಕೆ SSLC ಪಾಸ್/ಫೇಲ್ ಆದವರು ಬೇಕಾಗಿದ್ದಾರೆ. 18-25 ವರ್ಷದವರಿಗೆ ಆದ್ಯತೆ. ಸಂಪರ್ಕಿಸಿ
97413 97006
94487 83332
(ಪುರುಷರು ಮಾತ್ರ)

**ಬೇಕಾಗಿದ್ದಾರೆ**
ದೇವರಾಜ ಅರಸ್ ಬಡಾವಣೆ 'ಸಿ' ಬ್ಲಾಕ್‌ನಲ್ಲಿರುವ ನಂದಗೋಕುಲ ಆಂಗ್ಲ ಮಾಧ್ಯಮ ಶಾಲೆಗೆ B.Sc. B.Ed (PCM, CBZ), B.Sc ಹಾಗೂ M.Sc (Maths) ತರಬೇತಿ ಹೊಂದಿದ ಶಿಕ್ಷಕ/ಶಿಕ್ಷಕಿಯರು ಬೇಕಾಗಿದ್ದಾರೆ. ಕೂಡಲೇ ಸಂಪರ್ಕಿಸಿ
99640 17729

**REQUIRED**
Loan Officers and Managere Urgent Basis
Salary: 10000 to 15,000/-
88922 51149

**ಮಾರಾಟಕ್ಕೆ**
ಸ್ವಾಮಿ ವಿವೇಕಾನಂದ ಬಡಾವಣೆ ಸೈಟ್ (ಪಶ್ಚಿಮ) 30×60, ಉತ್ತಮ ಚಂದ್ ಬಡಾವಣೆ ಸೈಟ್ (ಉತ್ತರ) 35×64, ವಿದ್ಯಾನಗರ ಸೈಟ್ (ದಕ್ಷಿಣ) 40×60, ತರಳಬಾಳು ಬಡಾವಣೆ ಸೈಟ್ (ದಕ್ಷಿಣ) 30×50, SS ಲೇಔಟ್ ಸೈಟ್-40×63, ಮಹಾಲಕ್ಷ್ಮಿ ಲೇಔಟ್ ಸೈಟ್ ( ಉತ್ತಮ್ ಚಂದ್ - ಪಶ್ಚಿಮ) 35×61,
78996 36597, 99165 25828

**ಮನೆ ಬಾಡಿಗೆಗೆ ಇದೆ**
ದಾವಣಗೆರೆ ಸ್ವಾಮಿ ವಿವೇಕಾನಂದ ಬಡಾವಣೆ, 7ನೇ ಮೇನ್‌ನಲ್ಲಿ, 2ನೇ ಮಹಡಿಯಲ್ಲಿ, 2BHK ಮನೆ ಬಾಡಿಗೆಗೆ ಇದೆ.
97432 43564

**Wanted Teacher**
BA.,B.Ed.,(Eng): 01
Sri Siddeshwara Primary and High School,17th Cross, Anjaneya Badavane, Davanagere.
98444 43374

**ಮನೆ ಬಾಡಿಗೆಗೆ ಇದೆ**
ಜಯನಗರ "A" ಬ್ಲಾಕ್ ನಲ್ಲಿ ಡಬಲ್ ಬೆಡ್ ರೂಂ ಹೊಂದಿರುವ ಉತ್ತರ ಅಭಿಮುಖವಾಗಿರುವ 1ನೇ ಮಹಡಿ ಮನೆ ಬಾಡಿಗೆಗೆ ಇದೆ.
94484 39639 / 93536 53534

**ಬಟ್ಟೆ ಅಂಗಡಿ ಮಾರುವುದಿದೆ**
ಸುಸಜ್ಜಿತವಾದ ಹಾಲಿ ನಡೆಯುತ್ತಿರುವ ಮಹಿಳೆಯರ ಸೀರೆಗಳು, ಕುರ್ತಿಸ್, ಡ್ರೆಸ್ ಮೆಟೀರಿಯಲ್ಸ್ ಇರುವ ಬಟ್ಟೆ ಅಂಗಡಿ ಮಾರಾಟಕ್ಕಿದೆ. ಆಸಕ್ತರು ಸಂಪರ್ಕಿಸಿ
99023 76642

**Q-JOBS**
S.S.L.C., PUC., B.A., B.Com., B.B.M., BSc., B.Ed., etc
ಹುಡುಗರಿಗೆ & ಹುಡುಗಿಯರಿಗೆ ನಿಮಗೆ ಬೇಕಾಗಿರುವ ಕೆಲಸದ ಬಗ್ಗೆ ಮಾಹಿತಿ ಸಿಗುತ್ತದೆ. ಸಂಪರ್ಕಿಸಿ :
76250 89210

**ಬೆಂಗಳೂರಿನಲ್ಲಿ ಮನೆ ಕೆಲಸಕ್ಕೆ ಬೇಕಾಗಿದ್ದಾರೆ**
ಮನೆ ಕೆಲಸಕ್ಕೆ ಗಂಡ, ಹೆಂಡತಿ ಇರುವವರು ಬೇಕು. ಬಟ್ಟೆ, ಪಾತ್ರೆ ನೆಲ, ಬಾತ್ ರೂಂ, ಕ್ಲೀನಿಂಗ್ ಕೆಲಸ. ರೂಂ ಉಚಿತ, ಸಂಬಳ 18000/-
97400 98047, 9740098064

**ನೀರಿನ ಲೀಕೇಜ್**
(ವಾಟರ್ ಪ್ರೂಫಿಂಗ್)
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**ಅಣಬೆಗಳು ದೊರೆಯುತ್ತವೆ**
ಡಿ.ಸಿ.ಎಂ. ಟೌನ್ ಶಿಪ್‌ನಲ್ಲಿ ಅಣಬೆಗಳು ದೊರೆಯತ್ತವೆ.
ಸಂಪರ್ಕಿಸಿ
08192 255433

**ಮನೆ ಬಾಡಿಗೆಗೆ/ಲೀಸ್‌ಗಿದೆ**
2 ಬೆಡ್‌ರೂಂ, ಕಾರ್ಪೊರೇಷನ್ ಹಾಗೂ ಬೋರ್‌ವೆಲ್ ನೀರಿನ ಸೌಲಭ್ಯವಿರುವ, ವಾಸ್ತು ಪ್ರಕಾರ ಕಟ್ಟಿರುವ ಸುಸಜ್ಜಿತ 2ನೇ ಮಹಡಿ ಮನೆ ನಂ.1890/23, 4ನೇ ಮೇನ್, ಎಲ್‌ಐಸಿ ಕಾಲೋನಿ, ವಿದ್ಯಾನಗರ, ನೂತನ ಕಾಲೇಜ್ ಹಿಂಭಾಗ, ದಾವಣಗೆರೆ ಇಲ್ಲಿ ಬಾಡಿಗೆಗೆ/ಲೀಜ್‌ಗಿದೆ. ಸಂಪರ್ಕಿಸಿ.
93410 12022

**ಸಂಘ-ಸಂಸ್ಥೆಗಳ, ಟ್ರಸ್ಟ್‌ಗಳ**
GST & INCOME TAX
ನೋಂದಣಿ, ನವೀಕರಣ, ಆಡಿಟ್ ಮಾಡಿಕೊಡುತ್ತೇವೆ.
94838 62779

**ಬೇಕಾಗಿದ್ದಾರೆ**
SSLC/PUC ಆದ ಮಹಿಳೆಯರು ರ್‍ಯಾಕ್‌ನಿಂದ ಸ್ಟಾಕ್ ತೆಗೆಯಲು ಹಾಗೂ ಅನುಭವವುಳ್ಳ ಬಿಲ್ಲಿಂಗ್ ಕ್ಲರ್ಕ್ ಸಗಟು ಔಷಧಿ ಅಂಗಡಿಗೆ ಬೇಕಾಗಿದ್ದಾರೆ. ಭೇಟಿ ಸಮಯ : ಸಂಜೆ 6.30ರ ನಂತರ
ಶ್ರೀ ಗುರು ಎಂಟರ್‌ಪ್ರೈಸಸ್
#579, 6ನೇ ಮುಖ್ಯರಸ್ತೆ
ಪಿ.ಜೆ. ಬಡಾವಣೆ, ದಾವಣಗೆರೆ.

**WANTED**
PUC or Any Degree with Basic Computer Knowledge is must and Tele Caller, for Male and Female.
Contact: Excellent Electronics
#2137/1, 4th Main, 3rd Cross, MCC A'Block, Davangere - 577004
Tel No-98865 15100

॥ಶ್ರೀ ವೀರಭದ್ರೇಶ್ವರ ಪ್ರಸನ್ನ॥

**ಕೈಲಾಸ ಸಮಾರಾಧನೆ ಆಹ್ವಾನ**



ಶ್ರೀಮತಿ ಶ್ರೀ ರವಿಶಂಕರ್ ಎಂ.ಎಸ್. ಮತ್ತು ಸಹೋದರರು
ರವಿ ಟ್ರೇಡಿಂಗ್ ಕಾರ್ಪೋರೇಷನ್
ಪಿ.ಬಿ. ರಸ್ತೆ, ದಾವಣಗೆರೆ.
ಇವರು ಮಾಡುವ ವಿಜ್ಞಾಪನೆಗಳು.

ದಿ. : 07.11.2021ನೇ ಭಾನುವಾರ ಮಧ್ಯಾಹ್ನ 2.00ಕ್ಕೆ ನಮ್ಮ ಪೂಜ್ಯ ಮಾತೋಶ್ರೀಯವರಾದ
ಶ್ರೀಮತಿ ಮಾಗಾನಹಳ್ಳಿ ಸರೋಜಮ್ಮ
(ದಿ॥ ಶ್ರೀ ಮಾಗಾನಹಳ್ಳಿ ಸೋಮನಾಥಪ್ಪ ಇವರ ಧರ್ಮಪತ್ನಿ)
ಇವರು ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
"ಕೈಲಾಸ ಸಮಾರಾಧನೆ"ಯನ್ನು
ದಿನಾಂಕ : 11.11.2021ನೇ ಗುರುವಾರ ಮಧ್ಯಾಹ್ನ 12.30ಕ್ಕೆ ದಾವಣಗೆರೆ, ಪಿ.ಬಿ. ರಸ್ತೆ, ಷಡಕಪ್ಪ ಕಾಂಪೌಂಡ್‌ನಲ್ಲಿರುವ ಮೃತರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು :
ಶ್ರೀಮತಿ ಶ್ರೀ ರವಿಶಂಕರ್ ಮತ್ತು ಸಹೋದರರು, ಸೊಸೆಯಂದಿರು, ಮೊಮ್ಮಕ್ಕಳು, ಮಾಗಾನಹಳ್ಳಿ ವಂಶಸ್ಥರು ಹಾಗೂ ಬಂಧು-ಮಿತ್ರರು

ವಿ.ಸೂ. ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.

**ನೇರ ಪರೀಕ್ಷೆಗಳು**
ಉನ್ನತ ಶಿಕ್ಷಣಕ್ಕೆ ಮತ್ತು ಸರ್ಕಾರಿ ಕೆಲಸಕ್ಕೆ ಉಪಯೋಗ
SSLC, PUC Technical & Non Tecnical Courses Pharmacy & BHMS (Goverment & Private College)
ಶ್ರೀ ಸಾಯಿ ಕರೆಸ್ಪಾಂಡೆನ್ಸ್ ಕಾಲೇಜ್
ಸೋಮ ಮೆಡಿಕಲ್ಸ್ ಮೇಲೆ ಗಣೇಶ ದೇವಸ್ಥಾನದ ಹಿಂಭಾಗ, ರಾಂ&ಕೋ ಸರ್ಕಲ್, ದಾವಣಗೆರೆ.
87490 24789, 82173 02649

ಓಂ ಶ್ರೀ ದತ್ತಾತ್ರೇಯ ಪ॥ ಶ್ರೀರಾಮ್ ಭಟ್
ನಿಮ್ಮ ಧ್ವನಿಯ ಮೂಲಕ ನಿಮ್ಮ ಸಮಸ್ಯೆಗಳನ್ನು ಅರಿತು ಪ್ರಶ್ನೆ ಶಾಸ್ತ್ರದಿಂದ ನಿಮ್ಮ ಕಠಿಣ ಸಮಸ್ಯೆಗಳಿಗೆ 3 ದಿನಗಳ ಪರಿಹಾರ. ನಿಮ್ಮ ಒಂದು ದಿವ್ಯ ಕರೆ ನಿಮ್ಮ ಜೀವನವನ್ನು ಬದಲಿಸುತ್ತದೆ. ದೂರವಾಣಿ ಮೂಲಕ ಇಂದೇ ಕರೆ ಮಾಡಿ ಮೊ. 98862 30791

**WANTED**
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಮಹಿಳಾ/ಪುರುಷ ಅಭ್ಯರ್ಥಿಗಳು ಬೇಕಾಗಿದ್ದಾರೆ.
ಸಂಪರ್ಕಿಸಿ
ಗಂಗಾವತಿ ಸಿಲ್ಕ್ ಸ್ಯಾರಿ ಸೆಂಟರ್
ಬಿನ್ನಿ ಕಂಪನಿ ರೋಡ್, ದಾವಣಗೆರೆ-1

# ನಾಯಕರ ಅಂಗಳಕ್ಕೆ ಬಿಟ್‌ಕಾಯಿನ್ ಹಗರಣ

**(1ನೇ ಪುಟದಿಂದ)** ಎಂದು ಆರೋಪಿಸಿ, ಅಧಿಕಾರಿಯೊಬ್ಬರು ಪ್ರಧಾನಮಂತ್ರಿಗಳಿಗೆ ಪತ್ರ ಬರೆದ ಹಿನ್ನೆಲೆಯಲ್ಲಿ ಬಿಟ್ ಕಾಯಿನ್ ಹಗರಣದ ಕುರಿತು ಎಫ್.ಐ.ಆರ್ ದಾಖಲಿಸಲಾಗಿದೆ.

ಈ ಮಧ್ಯೆ ತನಿಖೆ ನಡೆಸುತ್ತಿರುವ ಪೊಲೀಸರಿಗೆ ಬಿಟ್ ಕಾಯಿನ್ ಹಗರಣದ ರೂವಾರಿ ಹ್ಯಾಕರ್ ಶ್ರೀಕೃಷ್ಣ ತಲೆನೋವಾಗಿ ಪರಿಣಮಿಸಿದ್ದು, ಈತನನ್ನು ರಕ್ಷಿಸುವ ಸಲುವಾಗಿ ಪ್ರಭಾವಿಗಳು ಅಪಾರ ಪ್ರಮಾಣದ ಹಣ ಪಡೆದಿದ್ದಾರೆ ಎಂಬ ಆರೋಪಗಳಿಗೆ ಪುಷ್ಟಿ ನೀಡುವಂತಹ ದಾಖಲೆಗಳು ಲಭ್ಯವಾಗತೊಡಗಿವೆ.

ಇದೇ ರೀತಿ ಹ್ಯಾಕರ್ ಶ್ರೀಕೃಷ್ಣ ಬಿಟ್ ಕಾಯಿನ್ ದಂಧೆಯಲ್ಲಿ ಮಾತ್ರವಲ್ಲ, ಹಲವು ವ್ಯವಹಾರಗಳ ವ್ಯವಸ್ಥೆಯನ್ನೂ ಹ್ಯಾಕ್ ಮಾಡಿದ್ದು, ಈ ಹಿನ್ನೆಲೆಯಲ್ಲಿ ದೊಡ್ಡ ದೊಡ್ಡ ಕಂಪನಿಗಳ ಮುಖ್ಯಸ್ಥರ ಹೆಸರುಗಳೂ ಕೇಳಿ ಬರತೊಡಗಿವೆ ಎನ್ನಲಾಗುತ್ತಿದೆ. ಸರ್ಕಾರದ ಬಹುದೊಡ್ಡ ಯೋಜನೆಯ ಟೆಂಡರ್ ಕರೆದಾಗ ಕಡಿಮೆ ದರ ನೋಂದಾಯಿಸಿದವರಿಗೆ ಅದರ ಗುತ್ತಿಗೆ ನೀಡುವುದು ವಾಡಿಕೆ. ಆದರೆ ಹೀಗೆ ಟೆಂಡರ್ ಪ್ರಕ್ರಿಯೆಯಲ್ಲಿ ಪಾಲ್ಗೊಂಡವರು ಯಾವ ದರ ನಮೂದಿಸಿದ್ದಾರೆ ಎಂಬುದನ್ನು ಅರಿಯಲು ಶ್ರೀಕೃಷ್ಣ ಸಂಬಂಧಪಟ್ಟ ಸರ್ವರ್ ಅನ್ನೇ ಹ್ಯಾಕ್ ಮಾಡುತ್ತಿದ್ದ ಎಂಬುದು ಈಗಿನ ಆರೋಪ.


ಇದೇ ರೀತಿ ಹಲವು ಬಗೆಯಲ್ಲಿ ಹ್ಯಾಕ್ ಮಾಡುವ ಶ್ರೀಕೃಷ್ಣನನ್ನು ಬಳಸಿಕೊಂಡು ಈ ಹಿಂದೆ ಉನ್ನತ ಸ್ಥಾನದಲ್ಲಿದ್ದವರ ಮಗ ಅಮಿತ್ ಷಾ ಅವರಿಗೆ ಸಂಬಂಧಪಟ್ಟ ವ್ಯವಹಾರಗಳ ಮೇಲೂ ನಿಗಾ ಇಟ್ಟಿದ್ದರು ಎಂಬ ಕುತೂಹಲಕರ ಅಂಶವೂ ಬೆಳಕಿಗೆ ಬಂದಿದೆ.

ಹ್ಯಾಕರ್ ಶ್ರೀಕೃಷ್ಣನನ್ನು ವ್ಯವಸ್ಥಿತವಾಗಿ ಬಳಸಿಕೊಂಡು ತಮ್ಮಿಚ್ಛೆಯ ವ್ಯವಹಾರಗಳಲ್ಲಿ ಪ್ರಭಾವಿಗಳು ಬಳಸುತ್ತಿದ್ದರು ಎಂಬ ಮಾತುಗಳು ಕೇಳಿ ಬರುತ್ತಿದ್ದು ಇದರಿಂದಾಗಿ ಬಿಟ್ ಕಾಯಿನ್ ವ್ಯವಹಾರ ಮಾತ್ರವಲ್ಲದೆ, ಇನ್ನೂ ಹಲವು ವ್ಯವಹಾರಗಳ ಜಾಲ ಬಯಲಿಗೆ ಬಂದಿದೆ ಎಂದು ಮೂಲಗಳು ತಿಳಿಸಿವೆ.

ಈ ಮಧ್ಯೆ ಪ್ರಭಾವಿ ವ್ಯಕ್ತಿಗಳು ಅಥವಾ ಅವರ ಪುತ್ರರು ಹ್ಯಾಕರ್ ಶ್ರೀಕೃಷ್ಣನನ್ನು ರಕ್ಷಣೆ ನೀಡಲು ದೊಡ್ಡ ಮೊತ್ತದ ಹಣ ಪಡೆದಿದ್ದಾರೆ ಎಂಬ ಆರೋಪಗಳು ದಟ್ಟವಾಗಿದ್ದು, ಈ ಎಲ್ಲದರ ಕುರಿತು ಪ್ರಧಾನಮಂತ್ರಿಗಳು ಗಂಭೀರ ನಿಗಾ ಇರಿಸಿದ್ದಾರೆ ಎಂದು ಮೂಲಗಳು ವಿವರಿಸಿವೆ.

ಇದೇ ಕಾರಣಕ್ಕಾಗಿ ಪ್ರಧಾನಮಂತ್ರಿಗಳಿಗೆ ವಿವರಣೆ ನೀಡುವ ಸಲುವಾಗಿ ಗುರುವಾರ ಅವರ ಭೇಟಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಸಮಯಾವಕಾಶ ಕೋರಿದ್ದು, ಪ್ರಧಾನಮಂತಿ ಅವಕಾಶ ನೀಡಿದರೆ ಬಿಟ್ ಕಾಯಿನ್ ಮತ್ತಿತರೆ ದಂಧೆಯ ಕುರಿತು ವಿವರಣೆ ನೀಡಲು ಸಜ್ಜಾಗಿದ್ದಾರೆ.

## ದಂಧೆಯಲ್ಲಿ ಕಾಂಗ್ರೆಸ್ ನಾಯಕರು



ನವದೆಹಲಿ, ನ. 10 - ಬಿಟ್ ಕಾಯಿನ್ ದಂಧೆಯಲ್ಲಿ ಕಾಂಗ್ರೆಸ್ ನಾಯಕರ ಹೆಸರಿದೆ, ಮೊದಲು ಕಾಂಗ್ರೆಸ್ ನಾಯಕರು ಆ ಬಗ್ಗೆ ಚಿಂತನೆ ಮಾಡಲಿ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ. ದೆಹಲಿಗೆ ಬಂದಿಳಿದ ಅವರನ್ನು ಮಾಧ್ಯಮದವರು ಕಾಂಗ್ರೆಸ್ ನಾಯಕ ಪ್ರಿಯಾಂಕ್ ಖರ್ಗೆ ಆರೋಪದ ಬಗ್ಗೆ ಪ್ರಶ್ನಿಸಿದಾಗ, ಪ್ರಿಯಾಂಕ್ ಖರ್ಗೆ ಹೇಳಿಕೆಗಳಿಗೆಲ್ಲಾ ನಾನು ಪ್ರತಿಕ್ರಿಯಿಸಲ್ಲ. ಪ್ರಿಯಾಂಕ್ ಸರಿಯಾದ ಸಂಪೂರ್ಣ ಮಾಹಿತಿ ತರಿಸಿಕೊಳ್ಳಲಿ. ದಂಧೆಯಲ್ಲಿ ಕಾಂಗ್ರೆಸ್ ನಾಯಕರ ಹೆಸರುಗಳಿವೆ. ಆ ಬಗ್ಗೆ ಅವರು ಮೊದಲು ಚಿಂತನೆ ಮಾಡಿಕೊಳ್ಳಲಿ ಎಂದರು.

## ಬಿಟ್‌ಕಾಯಿನ್‌ನಿಂದ ಸಿಎಂ ಪದಚ್ಯುತಿ




ಕಲಬುರಗಿ, ನ. 10 - ಬಿಟ್ ಕಾಯಿನ್ ದಂಧೆ ಪ್ರಕರಣದ ತನಿಖೆ ಪಾರದರ್ಶಕವಾದರೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪದವಿ ಕಳೆದುಕೊಳ್ಳುತ್ತಾರೆ. ಬಿಜೆಪಿಯಲ್ಲಿ ಮೂರನೇ ಮುಖ್ಯಮಂತ್ರಿ ನೇಮಕವಾಗುತ್ತಾರೆ ಎಂದು ಮಾಜಿ ಸಚಿವ ಹಾಗೂ ಕಾಂಗ್ರೆಸ್ ಶಾಸಕ ಪ್ರಿಯಾಂಕ್ ಖರ್ಗೆ ಹೇಳಿದ್ದಾರೆ.

ಕಲಬುರಗಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ತಂತ್ರಜ್ಞಾನ ಇಲಾಖೆಯ ಮಾಜಿ ಸಚಿವನಾಗಿ, ಬಿಟ್ ಕಾಯಿನ್ ವ್ಯವಹಾರದ ಬಗ್ಗೆ ತಿಳಿದುಕೊಂಡು ನಾನು ಮಾತನಾಡುತ್ತಿದ್ದೇನೆ. ಬಿಟ್ ಕಾಯಿನ್ ಹಗರಣ ನಡೆದಿರುವುದು ಬಿಜೆಪಿ ಸರ್ಕಾರದಲ್ಲಿ, ಬಿಜೆಪಿ ನಾಯಕರು ಲಂಚ ತೆಗೆದುಕೊಂಡಿರುವುದು ಬಿಟ್ ಕಾಯಿನ್ ಗಳ ಮೂಲಕ, ಸರ್ಕಾರದ ಕೆಲಸ ಮಾಡಿಕೊಡಲು ಕ್ರಿಪ್ಟೋ ಕರೆನ್ಸಿಗಳನ್ನು ತೆಗೆದುಕೊಂಡಿದ್ದಾರೆ ಎಂಬ ಮಾಹಿತಿಯಿದೆ ಎಂದು ಹೇಳಿದ್ದಾರೆ. ಈ ಬಗ್ಗೆ ಕೂಲಂಕುಶ ತನಿಖೆಯಾದರೆ ಈ ಸರ್ಕಾರ ಬಿದ್ದು ಹೋಗಿ ಬಸವರಾಜ ಬೊಮ್ಮಾಯಿಯವರ ಮುಖ್ಯಮಂತ್ರಿ ಪದವಿ ಹೋಗುವುದು ಖಂಡಿತ ಎಂದವರು ತಿಳಿಸಿದ್ದಾರೆ.

ಪ್ರಕರಣದ ಆರೋಪಿ ಶ್ರೀಕಿ ಭಟ್‌ನನ್ನು ಒಮ್ಮೆ ಬಂಧಿಸಿ ಮತ್ತೊಮ್ಮೆ ಬಿಡುಗಡೆ ಮಾಡಿಸಿ ನಂತರ ಸಿಐಡಿ ತನಿಖೆ ಹೀಗೆ ನಾಟಕವಾಡುತ್ತಿದ್ದಾರೆ. ಶ್ರೀಕಿ ಅನ್ನು ಬಂಧಿಸಿ ಆತನ ಬಳಿಯಿದ್ದ ಬಿಟ್ ಕಾಯಿನ್ ವಶಪಡಿಸಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳುತ್ತಾರೆ. ಹಾಗಾದರೆ ಆತನನ್ನು ಬಿಟ್ಟುಬಿಟ್ಟಿದ್ದೇಕೆ? ಆತನಿಂದ ಜಪ್ತಿ ಮಾಡಿರುವ ಬಿಟ್ ಕಾಯಿನ್ ಎಲ್ಲಿದೆ ಹಾಗಾದರೆ? ಬಿಜೆಪಿಯವರು ಬರೀ ಬಾಯಿಮಾತಿಗೆ ತನಿಖೆ ನಡೆಸುತ್ತೇವೆ ಎಂದು ಹೇಳುತ್ತಿದ್ದಾರಷ್ಟೆ, ಇದು ಕೇವಲ 200-300 ಕೋಟಿ ಹಗರಣ ಮಾತ್ರವಲ್ಲ, ಸಾವಿರಾರು ಕೋಟಿ ರೂಪಾಯಿ ಹಗರಣ, ಇದು ಕೇವಲ ನಮ್ಮ ರಾಜ್ಯಕ್ಕೆ ಸೀಮಿತವಾಗಿಲ್ಲ, ಹೊರ ರಾಜ್ಯ, ಅಂತರರಾಷ್ಟ್ರೀಯ ಮಟ್ಟದಲ್ಲಿ ಈ ಹಗರಣ ನಡೆದಿದೆ. ಡ್ರಗ್ಸ್ ದಂಧೆಯಂತೆ ಇದನ್ನು ಕೂಡ ಮುಚ್ಚಿಹಾಕಲು ಬಿಜೆಪಿ ನಾಯಕರು ನೋಡುತ್ತಿದ್ದಾರೆ ಎಂದು ಗಂಭೀರ ಆರೋಪ ಮಾಡಿದ್ದಾರೆ.

ಪ್ರಕರಣದಲ್ಲಿ ಯಾರು ಭಾಗಿಯಾಗಿದ್ದಾರೆ ಎಂದು ತನಿಖೆಯಲ್ಲಿ ಬಹಿರಂಗಪಡಿಸಲಿ, ನಮಗೆ ಸಿಕ್ಕಿರುವ ಮಾಹಿತಿ ಪ್ರಕಾರ ಬಿಟ್ ಕಾಯಿನ್ ಹಗರಣದಲ್ಲಿ ಬಿಜೆಪಿ ನಾಯಕರು ಭಾಗಿಯಾಗಿದ್ದು, ಅಧಿಕಾರಿಗಳ ನಿರ್ದೇಶನದ ಪ್ರಕಾರವೇ ಆಗಿದೆ, ಹಗರಣದಲ್ಲಿ ದೊಡ್ಡ ದೊಡ್ಡ ಅಧಿಕಾರಿಗಳು ಕೂಡ ಶಾಮೀಲಾಗಿದ್ದಾರೆ ಎಂದು ಆರೋಪಿಸಿದ್ದಾರೆ.

## ವೀರ ವನಿತೆ ಒನಕೆ ಓಬವ್ವ...



ಮಹಿಳೆಯರಿಗೆ ಧೈರ್ಯದ
ಕಹಳೆಯನ್ನು ಮೊಳಗಿಸಿ
ಏಳು ಸುತ್ತಿನ ಕೋಟೆಯ ಜನರ ಜೀವ ರಕ್ಷಿಸಿ
ಕನ್ನಡಿಗರ ಮನೆ-ಮನದಲ್ಲಿ
ವೀರ ವನಿತೆಯಾಗಿ ನೆಲೆಸಿ
ಶತ್ರುಗಳ ವಿರುದ್ಧ ಗೆಲುವಿನ ಕ್ರಾಂತಿ
ಬೆಳಗಿಸಿದವಳು
**ವೀರ ವನಿತೆ ಒನಕೆ ಓಬವ್ವಗೆ ನಮನಗಳು ...1**

ಶತ್ರುಗಳ ರುಂಡ ಚಂಡಾಡಿದಳು ಚಾಮುಂಡಿಯಾಗಿ
ಹೈದರಾಲಿಯ ಸೈನ್ಯವನ್ನು ಸೋಲಿಸಿದಳು ಏಕಾಂಗಿಯಾಗಿ
ಕಲ್ಲಿನ ಕೋಟೆಯನ್ನು ರಕ್ಷಿಸಿದಳು ಕ್ರಾಂತಿಯ ಮಹಿಳೆಯಾಗಿ
ತನ್ನ ಜೀವ ಇರುವ ವರೆಗೂ ಹೋರಾಡಿದಳು ದುರ್ಗದ ಉಳಿವಿಗಾಗಿ
**ವೀರ ವನಿತೆ ಒನಕೆ ಓಬವ್ವಗೆ ನಮನಗಳು...2**

ಮದಕರಿ ನಾಯಕನ ಕೋಟೆಗೆ ಜಪಿಸಿದಳು ಗೆಲುವಿನ ಮಂತ್ರ
ಮನೆಯಲ್ಲಿರುವ ಒನಕೆಯೇ ದುಷ್ಟರ ಸಂಹಾರಕ್ಕೆ ಅಸ್ತ್ರ
ದೇಹದ ಕಣ-ಕಣದಲ್ಲಿ ತುಂಬಿತ್ತು ರೋಷದ ಸೂತ್ರ
ಮನುಕುಲದ ಇತಿಹಾಸಕ್ಕೆ ಬರೆದಳು ಹೊಸ ಶಾಸ್ತ್ರ
**ವೀರ ವನಿತೆ ಒನಕೆ ಓಬವ್ವಗೆ ನಮನಗಳು...3**

- **ಎಂ.ಆರ್.ಹರೀಶ್**, ಕನ್ನಡ ಉಪನ್ಯಾಸಕರು
ರಾಘವೇಂದ್ರ ಕಾಲೇಜು, ದಾವಣಗೆರೆ.

## ಸಂಸದರ ನಿಧಿ ಪುನರಾರಂಭ

**(1ನೇ ಪುಟದಿಂದ)** ಪಡೆಯಲಿದ್ದಾರೆ. ಏಪ್ರಿಲ್ 2020ರಲ್ಲಿ ಕೊರೊನಾ ಕಾರಣದಿಂದಾಗಿ ಸಂಸದರ ಕ್ಷೇತ್ರಾಭಿವೃದ್ಧಿ ನಿಧಿ ನಿಲ್ಲಿಸಲಾಗಿತ್ತು. ಈ ಹಣವನ್ನು ಕೇಂದ್ರ ಸರ್ಕಾರದ ಸಂಚಿತ ನಿಧಿಗೆ ಸೇರ್ಪಡೆ ಮಾಡಲಾಗಿತ್ತು.

ಕೇಂದ್ರ ಸಂಪುಟ ಸಭೆಯ ನಂತರ ಈ ವಿಷಯ ತಿಳಿಸಿರುವ ಮಾಹಿತಿ ಮತ್ತು ಪ್ರಸಾರ ಸಚಿವ ಅನುರಾಗ್ ಠಾಕೂರ್, ಈ ಯೋಜನೆ 2025-26ರವರೆಗೆ ಮುದುವರೆಯಲಿದೆ ಎಂದು ಹೇಳಿದ್ದಾರೆ.

**ಮನೆ ಬಾಡಿಗೆಗೆ ಇದೆ**
Real Estat Agent
3 BHK Shivakumar swamy Badavane, 2 BHK Furnished Shivakumar Swamy Badavane, 2 BHK Tharalabalu Nagar, 2 BHK Nijalingappa Layout, 1 BHK Shivakumar Swamy Badavane.
78927 93994

**ಮನೆ/ಸೈಟು ಮಾರಾಟಕ್ಕಿದೆ**
20×30, 30×40, 30×50, 40×60 ಕಮರ್ಷಿಯಲ್ ಸೈಟ್ ಜಮೀನು ಮಾರಾಟಕ್ಕೆ ಇದೆ.
ಸಂಪರ್ಕಿಸಿ
93801 79506

**ಮನೆ ಬಾಡಿಗೆಗೆ ಇದೆ**
1 BHK, 2ನೇ ಮಹಡಿಯಲ್ಲಿ #1519/17
ಶ್ರೀ ಬಸವೇಶ್ವರ ಕೃಪ, ಶ್ರೀ ಸಂಜೀವಿನಿ ಆಂಜನೇಯ ಸ್ವಾಮಿ ದೇವಸ್ಥಾನದ ಹತ್ತಿರ ಬ್ಲೂ ಡಾರ್ಟ್ ಮತ್ತು ಕೆನರಾ ಬ್ಯಾಂಕ್ ಹಿಂದೆ. ಶ್ರೀ ಶಿವ ಕುಮಾರ ಸ್ವಾಮಿ ಬಡಾವಣೆ 3ನೇ ಹಂತ ಹದಡಿ ರಸ್ತೆ, ದಾವಣಗೆರೆ-560005
97431 21419, 83103 12057

**WANTED**
Male Candidates required for Offline Administration & Accountant.
Qualification- B.Com only.
Experience- 0-2 Years.
Salary- 7,000-10,000 per month
M- 81477 89522

**ಎಸ್.ಎಸ್. ಫಿಲ್ಲಿಂಗ್ ಸ್ಟೇಷನ್**
ಪೆಟ್ರೋಲ್ ಬಂಕ್‌ನಲ್ಲಿ ಕೆಲಸ ಮಾಡಲು ಹುಡುಗ/ಹುಡುಗಿಯರು ಬೇಕಾಗಿದ್ದಾರೆ.
ಲೋಕಿಕೆರೆ ಮೇನ್ ರೋಡ್, ಇಂಡಸ್ಟ್ರೀಯಲ್ ಏರಿಯಾ, ದಾವಣಗೆರೆ.
96200 94889
96865 51303

**ಶ್ರೀ ಕಾಮಾಕ್ಷಿ ಸ್ವರ್ಣ ಉಳಿತಾಯ ಯೋಜನೆ**
2ನೇ ಲಕ್ಕಿ ಡ್ರಾ ನಂಬರ್
850
ಅಂಬಿಕಾ
ಅತ್ಯುತ್ತಮ ಆಭರಣಕ್ಕಾಗಿ ಇಂದೇ ಭೇಟಿ ಕೊಡಿ:
ರಾಯ್ಕರ್ ಜ್ಯುವೆಲರಿ ವರ್ಕ್ಸ್ ಅಂಡ್ ಜೆಮ್ಸ್
ಶ್ರೇಷ್ಠ ಜಾತಿಯ ಅದೃಷ್ಟ ಹರಳುಗಳ, ರುದ್ರಾಕ್ಷಿಗಳ ಆಗರ
8ನೇ ಮೇನ್, ಚರ್ಚ್ ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ-2. ಫೋನ್ : 08192-252589

**WANTED ACCOUNTANT**
1. Position with specialization in Accountancy
2. Position with specialization in Taxation (Relevant Experience Preferred) For Construction Materials suppliers Candidates proficient in Tally ERP and Excel will be given preference.
**Educational Qualification:** B.Com freshersh with 70% +in all years, can Send in your Resumes.
Location: Davangere.
Email: Nithin.KS@chipsofstonc.in
Ph. 73530 35444

**ಬೇಕಾಗಿದ್ದಾರೆ**
ಐಷರ್ ಟ್ರ್ಯಾಕ್ಟರ್ ಶೋ ರೂಂನಲ್ಲಿ ಕೆಲಸ ಮಾಡಲು ದಾವಣಗೆರೆ, ಹರಿಹರ, ಹರಪನಹಳ್ಳಿಗೆ "ಮಾರಾಟ ಪ್ರತಿನಿಧಿಗಳು" ಬೇಕಾಗಿದ್ದಾರೆ. ಸ್ವಂತ ದ್ವಿಚಕ್ರ ವಾಹನವಿರಬೇಕು, ಲೈಸೆನ್ಸ್ ಇರಬೇಕು. ಆಕರ್ಷಕ ಸಂಬಳ+Incentive +TA,DA ಕೊಡಲಾಗುವುದು.
ಸಂಪರ್ಕಿಸಿ :
ಶಾರದಾ ಆಟೋಸ್
KSRTC, ಬಸ್ ಸ್ಟ್ಯಾಂಡ್ ಹತ್ತಿರ, ದಾವಣಗೆರೆ.
sharadaautosdavangere@gmail.com
ಫೋ.: 63646 76457

# ಸಿದ್ದರಾಮಯ್ಯ ಹೇಳಿಕೆ ವಿರುದ್ಧ ಬಿಜೆಪಿ ಎಸ್ಸಿ ಮೋರ್ಚಾ ಪ್ರತಿಭಟನೆ




ಹರಪನಹಳ್ಳಿ, ನ.10- ದಲಿತರು ಹೊಟ್ಟೆ ಪಾಡಿಗಾಗಿ ಬಿಜೆಪಿಗೆ ಹೋಗಿದ್ದಾರೆ ಎಂದು ಹೇಳಿಕೆ ನೀಡಿರುವ ವಿಪಕ್ಷ ನಾಯಕ ಸಿದ್ಧರಾಮಯ್ಯನವರ ವಿರುದ್ಧ ಪಟ್ಟಣದಲ್ಲಿ ಬಿಜೆಪಿ ಎಸ್ಸಿ ಮೋರ್ಚಾದಿಂದ ಪ್ರತಿಭಟನೆ ನಡೆಸಿ, ಅವರ ಪ್ರತಿಕೃತಿ ದಹನ ಮಾಡಲಾಯಿತು.

ಸ್ಥಳೀಯ ಬಿಜೆಪಿ ಕಾರ್ಯಾಲಯದಿಂದ ಮೆರವಣಿಗೆ ಮೂಲಕ ಪ್ರವಾಸಿ ಮಂದಿರ ವೃತ್ತಕ್ಕೆ ಆಗಮಿಸಿದ ಕಾರ್ಯಕರ್ತರು, ಬಹಿರಂಗ ಸಭೆ ನಡೆಸಿ, ಸಿದ್ದರಾಮಯ್ಯನವರ ಹೇಳಿಕೆಗೆ ಆಕ್ರೋಶ ವ್ಯಕ್ತಪಡಿಸಿದರು.

ಬಿಜೆಪಿ ತಾಲ್ಲೂಕು ಅಧ್ಯಕ್ಷ ಸತ್ತೂರು ಹಾಲೇಶ್, ಉಪಾಧ್ಯಕ್ಷ ನಿಟ್ಟೂರು ಸಣ್ಣಹಾಲಪ್ಪ, ತಾಲ್ಲೂಕು ಪಂಚಾಯ್ತಿ ಮಾಜಿ ಸದಸ್ಯ ಮಲ್ಲೇಶ್, ಜಿಲ್ಲಾ ಬಿಜೆಪಿ ಎಸ್.ಟಿ. ಮೋರ್ಚಾ ಕಾರ್ಯದರ್ಶಿ ಆರ್. ಲೋಕೇಶ್, ಪುರಸಭಾ ಸದಸ್ಯರುಗಳಾದ ಕಿರಣ್ ಶಾನಭಾಗ್, ವಿನಾಯಕ ಗೌಳಿ, ಎಂ.ಕೆ. ಜಾವೇದ್, ಮುಖಂಡರಾದ ವಿಶ್ವನಾಥ ಶಿರಗಾನಹಳ್ಳಿ, ಎಸ್.ಪಿ. ಲಿಂಬ್ಯಾನಾಯ್ಕ, ರಾಘವೇಂದ್ರಶೆಟ್ಟಿ, ಕಡತಿ ರಮೇಶ್, ದಾದಾಪುರ ಶಿವಾನಂದ, ಲಿಂಗರಾಜ, ಜೋಗಿ ಬಸವರಾಜ, ಗೌರಿಹಳ್ಳಿ ರಮೇಶ, ಸಿ.ಸಿ. ರಾಮಚಂದ್ರನಾಯ್ಕ, ಈಡಿಗರ ಅಂಜಿನಪ್ಪ, ಕಣಿವಿಹಳ್ಳಿ ಮಾರುತಿ, ಪೂರ್ಯಾನಾಯ್ಕ ಇನ್ನಿತರರು ಪಾಲ್ಗೊಂಡಿದ್ದರು.

# ಹೊನ್ನಾಳಿ: ಭತ್ತ ಖರೀದಿ ಕೇಂದ್ರಕ್ಕೆ ಒತ್ತಾಯ



**(1ನೇ ಪುಟದಿಂದ)** ಭದ್ರಾ ಜಲಾಶಯಗಳು, ತುಂಗಾ ಮೇಲ್ದಂಡೆ ಯೋಜನೆ, ತುಂಗಭದ್ರಾ ನದಿ ನೀರು ಹಾಗೂ ಕೊಳವೆ ಬಾವಿ ನೀರು ಬಳಸಿಕೊಂಡು ದಾವಣಗೆರೆ ಜಿಲ್ಲೆ ಮತ್ತು ಹೊನ್ನಾಳಿ ಭಾಗದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಭತ್ತವನ್ನು ಬೆಳೆಯಲಾಗುತ್ತದೆ. ಭತ್ತದ ಇಳುವರಿ ಬರುವ ಮುನ್ನ ಭತ್ತಕ್ಕೆ ಇರುವ ಬೆಲೆ, ಭತ್ತದ ಕೊಯ್ಲು ಆದ ನಂತರ ಇರುವುದಿಲ್ಲ.

ರೈತರು ಭತ್ತದ ಕೊಯ್ಲು ಪ್ರಾರಂಭಿಸುತ್ತಿದ್ದಂತೆ ಭತ್ತದ ದರ ಕುಸಿಯುತ್ತದೆ. ಆಗ ರೈತರು ಅನಿವಾರ್ಯವಾಗಿ ವರ್ತಕರು ಕೇಳಿದ ಬೆಲೆಗೆ ಭತ್ತವನ್ನು ಮಾರಾಟ ಮಾಡಬೇಕಾಗುತ್ತದೆ. ಇಂಥ ಅನಿವಾರ್ಯ ಸ್ಥಿತಿಯಿಂದ ರೈತರನ್ನು ಪಾರು ಮಾಡಬೇಕಾದರೆ ಸರ್ಕಾರ ಭತ್ತ ಖರೀದಿ ಕೇಂದ್ರವನ್ನು ತೆರೆಯಬೇಕು ಎಂದು ಮನವಿ ಮಾಡಿದರು.

ರೈಸ್‌ಮಿಲ್ ಮಾಲೀಕರ ಸಂಘದ ಮನವಿ ಪತ್ರ ಸ್ವೀಕರಿಸಿದ ಆಹಾರ ಮತ್ತು ನಾಗರಿಕ ಪೂರೈಕೆ ಖಾತೆ ಸಚಿವ ಉಮೇಶ್ ಕತ್ತಿ, ಸಂಬಂಧಿಸಿದ ಅಧಿಕಾರಿಗಳನ್ನು ತಮ್ಮ ಕೊಠಡಿಗೆ ಕರೆಸಿ ಶೀಘ್ರವೇ ಭತ್ತ ಖರೀದಿ ಕೇಂದ್ರವನ್ನು ತೆರೆಯಲು ಅಗತ್ಯ ಕ್ರಮ ಜರುಗಿಸುವಂತೆ ಸೂಚಿಸಿದರು. ರಾಜ್ಯ ರೈಸ್‌ಮಿಲ್ ಅಸೋಸಿಯೇಷನ್ ಅಧ್ಯಕ್ಷ, ಗಂಗಾವತಿ ಕ್ಷೇತ್ರದ ಶಾಸಕ ಪರಣ್ಣ ಮುನವಳ್ಳಿ, ರೈಸ್‌ಮಿಲ್ಸ್ ಮಾಲೀಕರಾದ ದಾವಣಗೆರೆ ರಾಜಣ್ಣ, ಮಲೇಕುಂಬಳೂರು ಕೆ.ಬಿ. ರಾಜಶೇಖರ್, ಜಾವೇದ್ ಸಾಬ್ ಇನ್ನಿತರರಿದ್ದರು.

## ತಾಂಡ್ರಪಾಡು ವೆಂಕಟೇಶ್ ನಿಧನ



ದಾವಣಗೆರೆ ಜಾಲಿನಗರ 2ನೇ ಮೇನ್, 3ನೇ ಕ್ರಾಸ್ ವಾಸಿ, ಸವಿತಾ ಸಮಾಜದ ಮುಖಂಡ ತಾಂಡ್ರಪಾಡು ವೆಂಕಟೇಶ್ (55) ಅವರು ದಿನಾಂಕ 10.11.2021ರಂದು ಬುಧವಾರ ರಾತ್ರಿ 8 ಗಂಟೆಗೆ ನಿಧನರಾಗಿದ್ದಾರೆ. ಪತ್ನಿ, ಮೂವರು ಪುತ್ರರು, ಓರ್ವ ಪುತ್ರಿ ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 11.11.2021ರ ಗುರುವಾರ ಬೆಳಗ್ಗೆ 11 ಗಂಟೆಗೆ ಗಾಂಧಿನಗರದ ಸಾರ್ವಜನಿಕ ರುದ್ರಭೂಮಿಯಲ್ಲಿ ನೆರವೇರಲಿದೆ.

## ಎಥೆನಾಲ್ ಬೆಂಬಲ ಬೆಲೆ ಹೆಚ್ಚಳ

**(1ನೇ ಪುಟದಿಂದ)** 63.45 ರೂ.ಗಳಿಗೆ ಹೆಚ್ಚಿಸಲಾಗಿದೆ ಎಂದು ಹೇಳಿದ್ದಾರೆ.

ಸಿ - ಹೆವಿ ಮೊಲಾಸಸ್‌ನಿಂದ ಪಡೆಯುವ ಎಥೆನಾಲ್ ಬೆಲೆಯನ್ನು ಈಗಿರುವ 45.69 ರೂ.ಗಳಿಂದ 46.66 ರೂ.ಗಳಿಗೆ ಹೆಚ್ಚಿಸಲಾಗಿದೆ. ಬಿ - ಹೆವಿ ಮೊಲಾಸಸ್‌ನಿಂದ ಪಡೆಯುವ ಎಥೆನಾಲ್ ಬೆಲೆಯನ್ನು ಈಗಿರುವ 57.61 ರೂ.ಗಳಿಂದ 59.08 ರೂ.ಗಳಿಗೆ ಹೆಚ್ಚಿಸಲಾಗಿದೆ ಎಂದವರು ಹೇಳಿದ್ದಾರೆ. 2020-21ರ ಸಾಲಿನಲ್ಲಿ ಪೆಟ್ರೋಲ್‌ನಲ್ಲಿ ಎಥೆನಾಲ್ ಬೆರೆಸುವುದು ಶೇ.8ಕ್ಕೆ ತಲುಪಿದೆ. ಇದು ಮುಂದಿನ ವರ್ಷ ಶೇ.10ಕ್ಕೆ ತಲುಪಲಿದೆ. 2025ರ ವೇಳೆಗೆ ಶೇ.20ರಷ್ಟು ಎಥೆನಾಲ್ ಬೆರೆಸಲು ಕೇಂದ್ರ ಸರ್ಕಾರ ಗುರಿ ಹೊಂದಿದೆ.

## ಆಯುಷ್ಮಾನ್ ನೋಂದಣಿಗೆ ಸೂಚನೆ

**(1ನೇ ಪುಟದಿಂದ)** ಆಯು ಷ್ಮಾನ್ ಭಾರತ್ ಡಿಜಿಟಲ್ ಮಿಷನ್‌ನಲ್ಲಿ ಭಾಗಿ ಯಾಗಬೇಕು. ಇವರು ತಮ್ಮಲ್ಲಿನ ವೈದ್ಯರು ಹಾಗೂ ಸಿಬ್ಬಂದಿಯನ್ನು ನೋಂದಣಿ ಮಾಡಿಸಬೇಕು ಎಂದು ಕೇಂದ್ರ ಸರ್ಕಾರ ತಿಳಿಸಿದೆ. ಸರ್ಕಾರಿ ಆರೋಗ್ಯ ಸಂಸ್ಥೆ ಗಳೂ ಸಹ ತಮ್ಮ ತಾಣಗ ಳಲ್ಲಿ ಹಾಸ್ಪಿಟಲ್ ಇನ್ಫಾರ್ಮೇಷನ್ ಸಿಸ್ಟಂ ಅಳವಡಿಸಿಕೊಂಡು ಡಿಜಿಟಲ್ ಆರೋಗ್ಯ ದಾಖಲೆ ಹೊಂದುವಂತೆ ಸರ್ಕಾರ ತಿಳಿಸಿದೆ.

## ಜೀವಿತ ಪ್ರಮಾಣ ಪತ್ರ ಸಲ್ಲಿಸಲು ಸೂಚನೆ

ದಾವಣಗೆರೆ, ನ.10- ಪ್ರಪಂಚದ ಎರಡನೇ ಮಹಾಯುದ್ಧದ ಗೌರವ ಧನ ಪಡೆಯುತ್ತಿರುವ ಫಲಾನುಭವಿಗಳು ತಮ್ಮ ಜೀವಿತ ಪ್ರಮಾಣ ಪತ್ರಗಳನ್ನು ಡಿ.31 ರೊಳಗಾಗಿ ಜಂಟಿ ನಿರ್ದೇಶಕರು, ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ, ಬೆಳಗಾವಿ ಇವರ ಕಾರ್ಯಾಲಯಕ್ಕೆ ವೈಯಕ್ತಿಕವಾಗಿ ಬಂದು ಸಲ್ಲಿಸಬೇಕು. ಜೀವಿತ ಪ್ರಮಾಣ ಪತ್ರ ಸಲ್ಲಿಸದೇ ಇರುವ ಫಲಾನುಭವಿಗಳ ಗೌರವ ಧನ ಸ್ಥಗಿತಗೊಳಿಸಲಾಗುವುದು ಎಂದು ಬೆಳಗಾವಿ ವಿಂಗ್ ಕಮಾಂಡರ್ ಸೂಚನೆ ನೀಡಿದ್ದಾರೆ.

ಅಂಗವಿಕಲರಾದ ಮಾಜಿ ಸೈನಿಕರು ಮತ್ತು ಅವರ ಅವಲಂಬಿತರಿಗೆ ಉದ್ಯೋಗ ಕಲ್ಪಿಸಲು ವಿಚಾರಗೋಷ್ಠಿಯನ್ನು ಹಮ್ಮಿಕೊಂಡಿದ್ದು, ಅಂಗವಿಕಲ ಮಾಜಿ ಸೈನಿಕರು ಹಾಗೂ ಅವರ ಅಂಗವಿಕಲ ಅವಲಂಬಿತರ ಮಾಹಿತಿಯನ್ನು ಇದೇ ದಿನಾಂಕ 18 ರೊಳಗಾಗಿ ಜಂಟಿ ನಿರ್ದೇಶಕರು, ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ ಬೆಳಗಾವಿ ಕಾರ್ಯಾಲಯಕ್ಕೆ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಮೊ. 88618 87366 ಕ್ಕೆ ಸಂಪರ್ಕಿಸಬಹುದು ಎಂದು ಬೆಳಗಾವಿ ವಿಂಗ್ ಕಮಾಂಡರ್ ಈಶ್ವರ ಕೊಡೊಳ್ಳಿ ತಿಳಿಸಿದ್ದಾರೆ.

# ನಗರವನ್ನು ಸ್ವಚ್ಛವಾಗಿಡಲು ಸಹಕರಿಸಿ

## ಸ್ವಚ್ಛತಾ ಆಂದೋಲನದಲ್ಲಿ ನ್ಯಾ. ರಾಜೇಶ್ವರಿ ಎನ್. ಹೆಗಡೆ ಕರೆ



ದಾವಣಗೆರೆ, ನ.10- ನಿಮ್ಮ ನಿಮ್ಮ ಮನೆಯಂಗಳದಂತೆ ನಗರವನ್ನೂ ಸ್ವಚ್ಛವಾಗಿಟ್ಟುಕೊಳ್ಳಲು ಸಹಕರಿಸುವಂತೆ ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಧೀಶರೂ, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಅಧ್ಯಕ್ಷರೂ ಆದ ಶ್ರೀಮತಿ ರಾಜೇಶ್ವರಿ ಎನ್. ಹೆಗಡೆ ಅವರು ಸಾರ್ವಜನಿಕರಿಗೆ ಕರೆ ನೀಡಿದರು.

ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ಜಿಲ್ಲಾ ವಕೀಲರ ಸಂಘ, ಮಹಾನಗರ ಪಾಲಿಕೆ ಸಂಯುಕ್ತಾಶ್ರಯದಲ್ಲಿ ನಗರದ ವಿದ್ಯಾನಗರದ 1ನೇ ಬಸ್ ಸ್ಟ್ಯಾಂಡ್ ಬಳಿಯ ಮುಖ್ಯ ವೃತ್ತದಲ್ಲಿ ಬುಧವಾರ ಮುಂಜಾನೆ ಹಮ್ಮಿಕೊಳ್ಳಲಾಗಿದ್ದ ಸ್ವಚ್ಛತಾ ಆಂದೋಲನ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಜನರು ತಮ್ಮ ಮನೆಗಳ ಅಂಗಳವನ್ನು ಸ್ವಚ್ಛವಾಗಿಟ್ಟು ಕೊಳ್ಳುತ್ತಾರೆ. ಆದರೆ ರಸ್ತೆಗಳಲ್ಲಿ ಎಲ್ಲೆಂದರಲ್ಲಿ ಉಗುಳುತ್ತಾರೆ. ನಗರವನ್ನು ಸ್ವಚ್ಛವಾಗಿಟ್ಟುಕೊಳ್ಳಲು ನಿರ್ಲಕ್ಷ್ಯ ವಹಿಸುತ್ತಾರೆ. ಆದರೆ ನಗರವನ್ನು ಸ್ವಚ್ಛವಾಗಿಟ್ಟುಕೊಂಡರೆ ಆರೋಗ್ಯದ ದೃಷ್ಟಿಯಲ್ಲಿ ಎಲ್ಲರೂ ಸುರಕ್ಷಿತವಾಗಿರಬಹುದು ಎಂದು ಕಿವಿ ಮಾತು ಹೇಳಿದರು.

ಸ್ಮಾರ್ಟ್ ಸಿಟಿ ಯೋಜನೆಯಡಿ ಸರ್ಕಾರಗಳು ಕೋಟ್ಯಾಂತರ ರೂ. ಅನುದಾನ ನೀಡುತ್ತವೆ. ಮಹಾನಗರ ಪಾಲಿಕೆಯಿಂದಲೂ ಸ್ವಚ್ಛತೆಗಾಗಿ ಸಾಕಷ್ಟು ಹಣ ವಿನಿಯೋಗಿಸಲಾಗುತ್ತಿದೆ. ಪಾಲಿಕೆ ಮಹಾಪೌರರು, ಆಯುಕ್ತರು ಸ್ವಚ್ಛತೆಗಾಗಿ ಸಹಕರಿಸುತ್ತಿದ್ದಾರೆ. ನಗರದ ಸ್ವಚ್ಛತೆ ಕೇವಲ ಇಲಾಖೆಗಳ ಕರ್ತವ್ಯವಲ್ಲ. ಸಾರ್ವಜನಿಕರ ಸಹಭಾಗಿತ್ವವೂ ಮುಖ್ಯ ಎಂದು ಹೇಳಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಪಾಲಿಕೆ ಮೇಯರ್ ಎಸ್.ಟಿ. ವೀರೇಶ್ ಮಾತನಾಡಿ, ಮಹಾನಗರ ಪಾಲಿಕೆ ವತಿಯಿಂದ ನಗರದ ಸ್ವಚ್ಛತೆಗೆ ಹೆಚ್ಚಿನ ಒತ್ತು ನೀಡಲಾಗುತ್ತಿದೆ. ಸಾರ್ವಜನಿಕರು ಸ್ವಚ್ಛತೆಗೆ ಸಹಕರಿಸುವ ಮೂಲಕ ಸ್ವಚ್ಛ ಭಾರತ್ ಮಿಷನ್‌ನ ಆಲ್ ಇಂಡಿಯಾ ರ‍್ಯಾಂಕಿಂಗ್‌ನಲ್ಲಿ ಹತ್ತರೊಳಗಿನ ಸ್ಥಾನವನ್ನು ದಾವಣಗೆರೆ ಪಡೆಯುವಂತಾಗಬೇಕು ಎಂದರು. ನಿತ್ಯ ಕಸ ಸಂಗ್ರಹಣೆಗಾಗಿ ಹೆಚ್ಚಿನ ವಾಹನಗ ಳನ್ನು, ನವೀನ ಯಂತ್ರಗಳನ್ನು ಪಾಲಿಕೆಯಿಂದ ಖರೀದಿಸಲಾಗಿದೆ. ಪೌರ ಕಾರ್ಮಿಕರನ್ನು ನೇಮಿಸಿಕೊಳ್ಳಲಾಗಿದೆ. ಸಾರ್ವಜನಿಕರು ಕಸ ವಿಂಗಡಿಸಿ ನೀಡಬೇಕು. ತಾವೇ ಕಸದ ಗಾಡಿಗೆ ಕಸ ಹಾಕಿದರೆ ಯಾವುದೇ ಶುಲ್ಕ ನೀಡುವಂತಿಲ್ಲ. ಆದರೆ ಕಾರ್ಮಿಕರು ಕಸ ತೆಗೆದುಕೊಂಡು ಹೋದರೆ 20-30 ರೂ. ಮಾತ್ರ ಶುಲ್ಕ ಕೊಡಬೇಕಾಗುತ್ತದೆ ಎಂದರು. ಇದೇ ವೇಳೆ ಪೌರ ಕಾರ್ಮಿಕರಿಗೆ ಕರ ಪತ್ರ ವಿತರಿಸಲಾಯಿತು.

ಹಿರಿಯ ಸಿವಿಲ್ ನ್ಯಾಯಾಧೀಶರೂ, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಯೂ ಆದ ಪ್ರವೀಣ್ ನಾಯಕ್, ಪಾಲಿಕೆ ಆಯುಕ್ತ ವಿಶ್ವನಾಥ ಮುದಜ್ಜಿ, ಸದಸ್ಯರಾದ ಗೀತಾ ದಿಳ್ಯೆಪ್ಪ, ಉಮಾ ಪ್ರಕಾಶ್, ರೇಣುಕಾ ಶ್ರೀನಿವಾಸ್, ಎಲ್.ಡಿ. ಗೋಣೆಪ್ಪ ಹಾಗೂ ಇತರರು ಉಪಸ್ಥಿತರಿದ್ದರು.

# ಭಾವನೆಗಳೊಂದಿಗೆ ಆಡುವುದೇ '100'

(1ನೇ ಪುಟದಿಂದ) ಮಾಡಲಾಗುತ್ತಿದೆ ಎಂದಿದ್ದಾರೆ.

ಶಿವಾಜಿ ಸುರತ್ಕಲ್ ತಮಗೆ ಯಶಸ್ಸು ತಂದ ಚಿತ್ರವಾಗಿದ್ದು, ಅದರ ಮುಂದುವರೆದ ಭಾಗದಂತೆ '100' ಮೂಡಿ ಬಂದಿದೆ. ಈ ಚಿತ್ರದ ನಾಯಕ ಪೊಲೀಸ್ ಇನ್ಸ್‌ಪೆಕ್ಟರ್ ಆಗಿರುವ ಕಾರಣ, ತುರ್ತು ಕರೆ ಸಂಖ್ಯೆಯಾದ 100 ಹೆಸರನ್ನು ಚಿತ್ರಕ್ಕೆ ಇಡಲಾಗಿದೆ ಎಂದವರು ವಿವರಿಸಿದರು.

ಸೈಬರ್ ಅಪರಾಧ, ಆನ್‌ಲೈನ್ ವಂಚನೆ, ಟ್ರೋಲ್, ಫೇಕ್ ನ್ಯೂಸ್ ಮುಂತಾದವರು ಆನ್‌ಲೈನ್ ಜಗತ್ತಿನ ಹಾವಳಿಗಳಾಗಿವೆ. ಆನ್‌ಲೈನ್ ಟ್ರೋಲ್ ಹಾಗೂ ಫೇಕ್ ನ್ಯೂಸ್‌ಗೆ ಸಿಲುಕಿದವರು ನಿಂದನೆ ತಾಳದೆ ಆತ್ಮಹತ್ಯೆ ಮಾಡಿಕೊಂಡ ಘಟನೆಗಳೂ ನಡೆದಿವೆ. ಆನ್‌ಲೈನ್ ಕುಟುಂಬವೊಂದರ ಮೇಲೆ ಯಾವ ರೀತಿಯ ಆಘಾತ ನೀಡಬಹುದು ಎಂಬುದನ್ನು ಚಿತ್ರದಲ್ಲಿ ಬಿಂಬಿಸಲಾಗಿದೆ ಎಂದು ರಮೇಶ್ ಹೇಳಿದರು.

ಈ ಸಂದರ್ಭದಲ್ಲಿ ಮಾತನಾಡಿದ ಚಿತ್ರ ನಿರ್ಮಾಪಕ ಎಂ. ರಮೇಶ್ ರೆಡ್ಡಿ, ಎಲ್ಲರ ಮನೆಯಲ್ಲಿ ನಡೆಯುವ ಘಟನೆಗಳೇ ಈ ಚಿತ್ರದ ಕಥೆಯಾಗಿ ಮೂಡಿ ಬಂದಿದೆ. ಇದು ಇಷ್ಟಪಟ್ಟು ಮಾಡಿರುವ ಚಿತ್ರವಾಗಿದೆ ಎಂದರು.

### ಪುನೀತ್ ಸಾವಿನ ಬಗ್ಗೆ ತಪ್ಪು ಕಲ್ಪನೆ

ಪುನೀತ್ ರಾಜ್‌ಕುಮಾರ್ ಅವರ ಸಾವಿನ ಕುರಿತ ತಪ್ಪು ಕಲ್ಪನೆಯಿಂದ ಕೆಲವರು ಜಿಮ್‌ನಿಂದ ದೂರವಾಗುತ್ತಿದ್ದಾರೆ. ಈ ಘಟನೆ ಒಂದು ಅಪವಾದವೇ ಹೊರತು ಸಾಮಾನ್ಯವಲ್ಲ ಎಂದು ನಟ ರಮೇಶ್ ಅರವಿಂದ್ ಹೇಳಿದ್ದಾರೆ.

ಕನಸುಗಳನ್ನು ಈಡೇರಿಸಿಕೊಳ್ಳಲು ದೇಹವೇ ವಾಹನ. ಹೀಗಾಗಿ ಆರೋಗ್ಯಕ್ಕಾಗಿ ಅಗತ್ಯ ಕಸರತ್ತನ್ನು ಎಲ್ಲರೂ ಮಾಡಬೇಕು. ಜಿಮ್ - ಹೆವಿಲಿಫ್ಟ್ ಅಲ್ಲದೇ ಇದ್ದರೂ ಸಣ್ಣ ಪುಟ್ಟ ವ್ಯಾಯಾಮಗಳನ್ನು ನಿಯಮಿತವಾಗಿ ಮಾಡಬೇಕು ಎಂದವರು ಕಿವಿಮಾತು ಹೇಳಿದ್ದಾರೆ.

### ತಲೆ ಖಾಲಿ ಇರುವುದೇ ವಯಸ್ಸಾಗದಿರುವ ಗುಟ್ಟು

ನಟ ರಮೇಶ್ ಅರವಿಂದ್ ಅವರಿಗೆ ವಯಸ್ಸಾಗುವುದೇ ಇಲ್ಲವೇ? ಎಂಬ ಪ್ರಶ್ನೆಗೆ ಮುಗುಳ್ನಗುತ್ತಾ ಉತ್ತರಿಸಿದ ರಮೇಶ್, ನನ್ನ ತಲೆ ಖಾಲಿ ಇದೆ! ಹೀಗಾಗಿಯೇ ವಯಸ್ಸಾಗುತ್ತಿಲ್ಲ ಎಂದು ಚಟಾಕಿ ಹಾರಿಸಿದರು. ಓದುವುದು, ಚಲನಚಿತ್ರ, ಕುಟುಂಬ ಹೊರತಾಗಿ ಬೇರೆ ಯಾವ ವಿಷಯವೂ ನಾನು ತಲೆಯಲ್ಲಿ ಇಟ್ಟುಕೊಳ್ಳುವುದಿಲ್ಲ. ತಲೆ ಖಾಲಿ ಇರುವುದರಿಂದ ವಯಸ್ಸು ಕಾಣುತ್ತಿಲ್ಲ ಎಂದು ಹೇಳಿದರು.

# ವೀರಶೈವ ಮಹಾಸಭಾದ ರಾಜ್ಯ ಮಹಿಳಾ ಅಧ್ಯಕ್ಷೆ ಅರುಣದೇವಿ ಅವರಿಗೆ ನಗರದಲ್ಲಿ ಸನ್ಮಾನ



ದಾವಣಗೆರೆ, ನ.10- ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ಹಿರಿಯ ಪುತ್ರಿಯೂ ಆಗಿರುವ ಅಖಿಲ ಭಾರತ ವೀರಶೈವ ಮಹಾಸಭಾದ ಮಹಿಳಾ ರಾಜ್ಯಾಧ್ಯಕ್ಷರಾದ ಶ್ರೀಮತಿ ಅರುಣದೇವಿ ಅವರು ಇಂದು ನಗರಕ್ಕೆ ಆಗಮಿಸಿದ್ದ ಸಂದರ್ಭದಲ್ಲಿ ಅಖಿಲ ಭಾರತ ವೀರಶೈವ ಮಹಾಸಭಾದ ಜಿಲ್ಲಾ ಘಟಕದ ಅಧ್ಯಕ್ಷರೂ ಆಗಿರುವ ದೂಡಾ ಅಧ್ಯಕ್ಷ ದೇವರಮನಿ ಶಿವಕುಮಾರ್ ಅವರು ಜಿಲ್ಲಾ ಘಟಕದ ವತಿಯಿಂದ ಸನ್ಮಾನಿಸಿ ಗೌರವಿಸಿದರು.

ಈ ಸಂದರ್ಭದಲ್ಲಿ ವೀರಶೈವ ಮಹಾ ಸಭೆಯ ರಾಷ್ಟ್ರೀಯ ಕಾರ್ಯಕಾರಿಣಿ ಸದಸ್ಯ ಶಿವನಗೌಡ ಟಿ. ಪಾಟೀಲ, ಜಿಲ್ಲಾ ಸಂಚಾಲಕ ಟಿಂಕರ್ ಮಂಜಣ್ಣ, ನಗರ ಯುವಘಟಕದ ಪ್ರಧಾನ ಕಾರ್ಯದರ್ಶಿ ಶ್ರೀಕಾಂತ್ ನೀಲಗುಂದ, ಉಪಾಧ್ಯಕ್ಷರುಗಳಾದ ಗುರುಶಾಂತ್ ಸೋಗಿ, ಅಭಿಷೇಕ್ ಪಿ.ಎಳೆಹೊಳೆ, ಸದಸ್ಯರಾದ ಪ್ರಶಾಂತ್ ಅಣಜಿ, ಶಿವಾನಂದ, ಮುತ್ತಣ್ಣ, ಮಹಿಳಾ ಜಿಲ್ಲಾ ಘಟಕದ ಅಧ್ಯಕ್ಷರಾದ ಉಮಾ ಎಂ.ಪಿ.ರಮೇಶ್, ಮಹಿಳಾ ನಗರ ಘಟಕದ ಅಧ್ಯಕ್ಷರಾದ ಪುಷ್ಪ ವಾಲಿ, ಪ್ರಧಾನ ಕಾರ್ಯದರ್ಶಿಗಳಾದ ಶೋಭಾ ಕೊಟ್ರೇಶ್, ಮುಖಂಡರಾದ ಮಂಜುಳಾ ಮಹೇಶ್, ದ್ರಾಕ್ಷಾಯಣಿ, ಮಾಜಿ ಮೇಯರ್ ಅಶ್ವಿನಿ ಪ್ರಶಾಂತ್, ಶೋಭಾ ಪಲ್ಲಾಗಟ್ಟೆ, ಮಂಗಳಾ, ಹರಿಹರ ನಗರಸಭಾ ಸದಸ್ಯರಾದ ಅಶ್ವಿನಿ ಕೃಷ್ಣ, ಸುಮಂಗಲ, ಮಂಜುಳಾ, ಕವಿತಾ, ಲಕ್ಷ್ಮಿ, ರೂಪ, ರೇಖಾ ಮತ್ತಿತರರು ಉಪಸ್ಥಿತರಿದ್ದರು.

# ಗಿಡ ಮರಗಳನ್ನು ಹಚ್ಚದೇ ಬಿಲ್ ಪಾವತಿ, ಪರಿಶೀಲನೆ



ಮೇಡ್ಲೇರಿ ಶಾಲೆಗೆ ಲೋಕಾಯುಕ್ತ ಡಿವೈಎಸ್‌ಪಿ ಭೇಟಿ

ರಾಣೇಬೆನ್ನೂರು, ನ.10- ತಾಲ್ಲೂಕಿನ ಮೇಡ್ಲೇರಿ ಗ್ರಾಮ ಪಂಚಾಯ್ತಿ ಅಧಿಕಾರಿಗಳು ಎನ್‌ಆರ್‌ಇಜಿ ಯೋಜನೆಯಡಿ ಕುದರಿಹಾಳ ರಸ್ತೆಯ ಮುಸ್ಲಿಂ ಸಮುದಾಯದ ಸ್ಮಶಾನ, ಅರೆಮಲ್ಲಾಪುರಕ್ಕೆ ಹೋಗುವ 3 ಕಿಮೀ ರಸ್ತೆ ಹಾಗೂ ಬೀರೇಶ್ವರ ಪ್ರೌಢಶಾಲೆಯಲ್ಲಿ ಗಿಡ ಮರಗಳನ್ನು ಹಚ್ಚಿದ್ದೇವೆ ಎಂದು ಬಿಲ್ ಪಾವತಿ ಮಾಡಿದ ಬಗ್ಗೆ ದೂರುಗಳು ಬಂದ ಹಿನ್ನೆಲೆಯಲ್ಲಿ ಲೋಕಾಯುಕ್ತರು ಬುಧವಾರ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಲೋಕಾಯುಕ್ತ ಡಿವೈಎಸ್‌ಪಿ ಡಾ. ಚಂದ್ರಶೇಖರ ಅವರು ಶ್ರೀ ಬೀರೇಶ್ವರ ಪ್ರೌಢ ಶಾಲೆಗೆ ಭೇಟಿ ನೀಡಿ ಶಾಲಾ ಆವರಣದಲ್ಲಿ ಪರಿಶೀಲನೆ ನಡೆಸಿದರು. ನಂತರ ಶಿಕ್ಷಕರೊಂದಿಗೆ ಸಮಾಲೋಚನೆ ನಡೆಸಿದರು. ಶಾಲಾ ಮೈದಾನದ ಆವರಣದಲ್ಲಿ ಶಿಕ್ಷಕರು ಹಾಗೂ ಮಕ್ಕಳು ಶ್ರಮದಾನದಿಂದ ಸಾವಿರಾರು ಗಿಡ ಮರಗಳನ್ನು ಹಚ್ಚಿದ್ದನ್ನು ಕಂಡು ಮೆಚ್ಚುಗೆ ವ್ಯಕ್ತಪಡಿಸಿದರು.

ಲೋಕಾಯುಕ್ತರು, ಶಾಲೆಯ ಮುಖ್ಯ ಶಿಕ್ಷಕ ಬಿ.ಜಿ. ತಾಯಮ್ಮನವರ ಅವರನ್ನು ಶಾಲಾ ಆವರಣದಲ್ಲಿ ಗಿಡಮರಗಳನ್ನು ಹಚ್ಚಿದ್ದು ಯಾವಾಗ ಎಂದು ವಿಚಾರಿಸಲಾಗಿ, ಇದಕ್ಕೆ ಉತ್ತರಿಸಿದ ತಾಯಮ್ಮನವರ 2008-09 ರಲ್ಲಿ ಅರಣ್ಯ ಇಲಾಖೆಯಿಂದ ಗಿಡಗಳನ್ನು ತಂದು ವಿದ್ಯಾದಾನ ಸಮಿತಿ ಪದಾಧಿಕಾರಿಗಳು, ಶಿಕ್ಷಕರು ಹಾಗೂ ಮಕ್ಕಳ ಶ್ರಮದಿಂದ ಗುಂಡಿ ತೋಡಿ ಮರಗಳನ್ನು ಹಚ್ಚಿದ್ದೇವೆ ಎಂದು ಸ್ಪಷ್ಟಪಡಿಸಿದರು.

ಗಿಡಮರಗಳನ್ನು ಹಚ್ಚದೇ ಗ್ರಾಮ ಪಂಚಾಯ್ತಿಯಿಂದ ಹೇಗೆ ಬಿಲ್ ಪಾಸ್ ಮಾಡಿದ್ದೀರಿ ಎಂದು ಗ್ರಾ.ಪಂ. ಪಿಡಿಓ ಎಂ.ಕೆ. ಪ್ರಕಾಶ ಅವರನ್ನು ತೀವ್ರವಾಗಿ ತರಾಟೆಗೆ ತೆಗೆದುಕೊಂಡರು. ಆಗ ಪಿಡಿಓ ಎಂ.ಕೆ. ಪ್ರಕಾಶ್, ನಾನು ಹೊಸದಾಗಿ ಬಂದಿದ್ದೇನೆ. ಚಾರ್ಜ್ ತೆಗೆದುಕೊಂಡು 3 ತಿಂಗಳಾಗಿದೆ ಎಂದಾಗ ಲೋಕಾಯುಕ್ತರು ನಿಮ್ಮ ಮೇಲೆ ಸಾಕಷ್ಟು ಜವಾಬ್ದಾರಿ ಇದೆ. ಗ್ರಾ.ಪಂ. ಉತ್ತರದಾಯಿತ್ವ ನಿಮ್ಮ ಮೇಲಿದೆ. ಎಂ.ಬಿ. ಪುಸ್ತಕ ಇಟ್ಟಿಲ್ಲ. ಎಷ್ಟು ಬಿಲ್ ಪಾಸು ಮಾಡಿಕೊಂಡಿದ್ದಾರೆ ಎಂಬುದನ್ನು ಪರಿಶೀಲಿಸಿ, ಆ ಹಣದಲ್ಲಿ ಶಾಲೆಗೆ ಶೌಚಾಲಯ, ಆಟದ ಮೈದಾನ ಸಮತಟ್ಟು ಮಾಡುವುದು ಸೇರಿದಂತೆ ಅಗತ್ಯ ಸೌಲಭ್ಯಗಳನ್ನು ಒದಗಿಸಿಕೊಟ್ಟು ಪುಣ್ಯ ಕಟ್ಟಿಕೊಳ್ಳಿ ಎಂದು ಗ್ರಾ.ಪಂ. ಅಧಿಕಾರಿಗೆ ಬುದ್ಧಿ ಹೇಳಿದರು.

ಗ್ರಾ.ಪಂ.ನಿಂದ ಇದುವರೆಗೂ ನಮ್ಮ ಶಾಲೆಗೆ ಯಾವುದೇ ಸೌಲಭ್ಯಗಳನ್ನು ನೀಡಿಲ್ಲ. ಅನೇಕ ಬಾರಿ ಮನವಿ ಮಾಡಿದ್ದೇವೆ, ಏನೂ ಪ್ರಯೋಜನವಾಗಿಲ್ಲ. ನಮ್ಮದು ಅನುದಾನಿತ ಪ್ರೌಢಶಾಲೆ. ಹೀಗಾಗಿ ಯಾವುದೇ ಅನುದಾನ ಬರುವುದಿಲ್ಲ. ಗ್ರಾಮ ಪಂಚಾಯಿತಿಯ ಎಲ್ಲ ಸರ್ಕಾರಿ ಕಾರ್ಯಕ್ರಮಗಳಿಗೆ ನಮ್ಮ ಶಾಲೆಯಿಂದ ಸಹಕಾರ ನೀಡುತ್ತಾ ಬಂದಿದ್ದೇವೆ ಎಂದು ಶಿಕ್ಷಕರು ತಿಳಿಸಿದರು.

ನಮ್ಮ ಶಾಲಾ ಆವರಣದ ಸುತ್ತ ಬಯಲು ಇದ್ದು, ಸುತ್ತಮುತ್ತಲಿನ ಜನತೆ ಬಯಲು ಬಹಿರ್ದೆಸೆಗೆ ಹೋಗುತ್ತಾರೆ. ಎಲ್ಲ ಕಡೆ ಗಲೀಜು ಮಾಡುತ್ತಾರೆ. ಇದರಿಂದ ಮಕ್ಕಳಿಗೆ ತೀವ್ರ ತೊಂದರೆಯಾಗಿದೆ. ರಾತ್ರಿ ಹೊತ್ತು ಕುಡುಕರ ಹಾವಳಿ ಹೆಚ್ಚಾಗಿದೆ. ಎಲ್ಲಿ ಬೇಕೆಂದರಲ್ಲಿ ಕುಡಿದು ಬಾಟಲಿ ಎಸೆಯುತ್ತಾರೆ. ಕುರಿ, ಜಾನುವಾರುಗಳನ್ನು ಮೇಯಿಸುತ್ತಾರೆ ಎಂದಾಗ, ಗ್ರಾಮೀಣ ಪೊಲೀಸರಿಗೆ ಸೂಕ್ತ ಕ್ರಮ ಕೈಗೊಳ್ಳಲು ತಿಳಿಸುತ್ತೇನೆ. ಬೀರೇಶ್ವರ ಶಾಲೆಗೆ ಶೌಚಾಲಯವನ್ನು ನಿರ್ಮಿಸಿ ಕೊಡಲು ಜಿಲ್ಲಾ ಪಂಚಾಯ್ತಿ ಸಿಇಓ ಅವರ ಜೊತೆ ಚರ್ಚಿಸುತ್ತೇನೆ ಎಂದರು.

ಗ್ರಾಮ ಪಂಚಾಯಿತಿಯಿಂದ ಕಟ್ಟಿಸಿಕೊಡದಿದ್ದರೆ ಇನ್ನೊಂದು ಸಲ ಈ ಶಾಲೆಗೆ ಭೇಟಿ ನೀಡಿ, ನನ್ನ ಸ್ವಂತ ಹಣದಲ್ಲಿ ಶೌಚಾಲಯ ನಿರ್ಮಾಣ ಮಾಡಿಕೊಡುತ್ತೇನೆ ಎಂದು ಲೋಕಾಯುಕ್ತ ಡಿವೈಎಸ್‌ಪಿ ಡಾ. ಚಂದ್ರಶೇಖರ್ ಭರವಸೆ ನೀಡಿದರು. ವಾಗೀಶ್ ಹುಲ್ಲತ್ತಿ, ಸಣ್ಣಲಕುಮಪ್ಪ ಕೋರಿ, ಶಾಲಾ ಶಿಕ್ಷಕರು ಹಾಗೂ ಪಂಚಾಯಿತಿ ಸಿಬ್ಬಂದಿಗಳು ಹಾಜರಿದ್ದರು.

## ಮಹಿಳೆಯ ಅನುಮಾನಾಸ್ಪದ ಸಾವು: ಪತಿ ಬಂಧನ

ದಾವಣಗೆರೆ, ನ.10- ಭದ್ರಾ ಚಾನಲ್‌ನಲ್ಲಿ ಅನುಮಾನಾಸ್ಪದವಾಗಿ ಮೃತಪಟ್ಟ ಮಹಿಳೆಯ ಶವ ಪತ್ತೆಯಾದ ಪ್ರಕರಣಕ್ಕೆ ಸಂಬಂಧಿಸಿದಂತೆ ಮೃತಳ ಪತಿಯನ್ನು ಹರಿಹರ ಗ್ರಾಮಾಂತರ ಪೊಲೀಸರು ಬಂಧಿಸಿದ್ದಾರೆ.

ಜಗಳೂರು ತಾಲ್ಲೂಕಿನ ಅಸಗೋಡು ಗ್ರಾಮದ ಚೌಡಮ್ಮ ಅಲಿಯಾಸ್ ಕವಿತಾ (28) ಈಕೆಯ ಶವವು ಹರಿಹರ ಗ್ರಾಮಾಂತರ ಪೊಲೀಸ್ ಠಾಣಾ ವ್ಯಾಪ್ತಿಯ ಮಿಟ್ಲ ಕಟ್ಟೆ ಗ್ರಾಮದ ಭದ್ರಾ ಚಾನಲ್‌ನಲ್ಲಿ ಪತ್ತೆಯಾಗಿತ್ತು. ಈಕೆಯ ಸಾವಿನ ಬಗ್ಗೆ ಗಂಡ - ಅಸಗೋಡು ಗ್ರಾಮದ ಮಾರುತಿ ಮೇಲೆ ಅನುಮಾನ ವ್ಯಕ್ತಪ ಡಿಸಿ ಪೊಲೀಸರಿಗೆ ದೂರು ನೀಡಿದ್ದರು.

ಪ್ರಕರಣದ ಸಂಬಂಧ ದಾವಣಗೆರೆ ಗ್ರಾಮಾಂತರ ಉಪವಿಭಾಗದ ಸಹಾಯಕ ಪೊಲೀಸ್ ಅಧೀಕ್ಷಕರಾದ ಕನಿಕಾ ಸಕ್ರಿವಾಲ್ ಮಾರ್ಗದರ್ಶನದಲ್ಲಿ ಹರಿಹರ ಸಿಪಿಐ ಯು. ಸತೀಶ್ ಕುಮಾರ್ ತನಿಖೆ ನಡೆಸಿದ್ದಾರೆ.

ಹರಿಹರ ಗ್ರಾಮಾಂತರ ಠಾಣೆಯ ಪಿಎಸ್‌ಐ ವೀರಬಸಪ್ಪ ಕುಸಲಾಪುರ ಹಾಗೂ ಸಿಬ್ಬಂದಿಗಳಾದ ಯಾಸಿನ್ ಉಲ್ಲಾ, ಮಹಮ್ಮದ್ ಇಲಿಯಾಸ್, ಸೈಯದ್ ಗಫಾರ್, ವೆಂಕಟೇಶ್, ದ್ವಾರಕೇಶ್, ಅಮ್ಜದ್ ಖಾನ್, ಮುರಳೀಧರ, ಸಿದ್ದಪ್ಪ ಅವರನ್ನು ಒಳಗೊಂಡ ತಂಡ ಪ್ರಕರಣವನ್ನು ಬೇಧಿಸಿದೆ.

## ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ನಿಟುವಳ್ಳಿ ಹಾಗೂ ನಿಟುವಳ್ಳಿ ಹೊಸಬಡಾವಣೆ, ದುರ್ಗಾಂಬಿಕ ದೇವಸ್ಥಾನ, 60 ಅಡಿ ರಸ್ತೆ ಮತ್ತು ಸುತ್ತ ಮುತ್ತಲಿನ ಪ್ರದೇಶಗಳು, ರಾಮನಗರ ಮುಖ್ಯರಸ್ತೆ, ಎಸ್.ಓ.ಜಿ ಕಾಲೋನಿ ಹಾಗೂ ಇತರೆ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 4 ಗಂಟೆಯವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ತಿಳಿಸಿದೆ.

## ಡಿ. ಸುಹಾಸ್‌ಗೆ ಪಿಹೆಚ್‌ಡಿ ಪದವಿ



ದಾವಣಗೆರೆ, ನ.10- ನಗರದ ಜೈನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಎಂಬಿಎ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಿ. ಸುಹಾಸ್ ಅವರಿಗೆ ಕುವೆಂಪು ವಿಶ್ವವಿದ್ಯಾಲಯ ಪಿಹೆಚ್‌ಡಿ ಪದವಿ ನೀಡಿದೆ. ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್ ಅಂಡ್ ರೀಸರ್ಚ್‌ನ ಪ್ರಾಧ್ಯಾಪಕ ಡಾ. ಎಚ್.ಎನ್. ರಮೇಶ್ ಮಾರ್ಗದರ್ಶನದಲ್ಲಿ 'ಪರ್ಫಾರ್ಮೆನ್ಸ್ ಇವ್ಯಾಲ್ಯೂಯೇಷನ್ ಆಫ್ ಇ-ಬ್ಯಾಂಕಿಂಗ್ ಸರ್ವೀಸಸ್- ಎ ಸ್ಟಡೀ ಆನ್ ಇ-ಬ್ಯಾಂಕಿಂಗ್ ಸರ್ವೀಸಸ್ ಆಫ್ ಸೆಲೆಕ್ಟ್ ನ್ಯಾಷನಲೈಸ್ಡ್ ಬ್ಯಾಂಕ್ಸ್' ಎಂಬ ಮಹಾ ಪ್ರಬಂಧವನ್ನು ಸುಹಾಸ್ ಮಂಡಿಸಿದ್ದು, ಇವರಿಗೆ ವಿವಿ ಯು ಪಿಹೆಚ್‌ಡಿ ಪ್ರದಾನ ಮಾಡಿದೆ.

**ಘನತೆವೆತ್ತ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಹಾಗೂ ಸಿ.ಜೆ.ಎಂ. ದಾವಣಗೆರೆ**
ಸಿ.ಆರ್ ಮಿಸ್. ನಂಬರ್. 96/2021

ಅರ್ಜಿದಾರರು: 1) **ಶ್ರೀಮತಿ ಶಾಂತಮ್ಮ ಬಿನ್ ಲೇಟ್ ಚಿನ್ನಪ್ಪ. (ಕೋಂ ಹಾಲೇಶಪ್ಪ)**, ವಯಸ್ಸು 54 ವರ್ಷ, ಮನೆಗೆಲಸ, ವಾಸ: ಸಾಲಕಟ್ಟೆ ಗ್ರಾಮ, ದೇವರಬೆಳಕೆರೆ ಅಂಚೆ, ಹರಿಹರ ತಾಲ್ಲೂಕು, ದಾವಣಗೆರೆ ಜಿಲ್ಲೆ. 2) **ಶ್ರೀಮತಿ ಕರಿಬಸಮ್ಮ ಬಿನ್ ಲೇಟ್ ಚಿನ್ನಪ್ಪ, (ಕೋಂ. ಆರ್.ಜಿ. ಮಂಜಪ್ಪ)**, ವಯಸ್ಸು 48 ವರ್ಷ, ಮನೆಗೆಲಸ, ವಾಸ : ನಂದಿಗನಹಳ್ಳಿ, ದಾವಣಗೆರೆ ತಾಲ್ಲೂಕ್. **– ವಿರುದ್ಧ –**
ಎದುರುದಾರರು :ಮಾನ್ಯ ತಹಶೀಲ್ದಾರರು ಹಾಗೂ ಜನನ-ಮರಣ ನೋಂದಣಾಧಿಕಾರಿಗಳು, ತಹಶೀಲ್ದಾರ್ ರವರ ಕಛೇರಿ, ರೈತಭವನ, ಪಿಬಿ ರಸ್ತೆ, ದಾವಣಗೆರೆ.

**ಸಾರ್ವಜನಿಕ ಪ್ರಕಟಣೆ**

ಅರ್ಜಿದಾರರ ತಾಯಿ **ಶ್ರೀಮತಿ ಹನುಮಕ್ಕ ಕೋಂ. ಚಿನ್ನಪ್ಪ** ಇವರು ದಾವಣಗೆರೆ ತಾಲ್ಲೂಕ್ ಮಲ್ಲಶೆಟ್ಟಿಹಳ್ಳಿ ಗ್ರಾಮದಲ್ಲಿನ ಸ್ವಗೃಹದಲ್ಲಿ **ದಿನಾಂಕ : 27-08-1974** ರಂದು ವಯೋನಿಮಿತ್ಯ ಸಹಜ ಪೌತಿಯಾಗಿರುವುದರಿಂದ ಮೃತರ ಮರಣದ ವಿವರಣೆಗಳನ್ನು ಎದುರುದಾರರು ಮರಣ ವಹಿಗಳಲ್ಲಿ ನಮೂದಿಸಿಕೊಂಡು, ಮರಣ ಸಮರ್ಥನಾ ಪತ್ರವನ್ನು ವಿತರಿಸುವುದಕ್ಕಾಗಿ ಅರ್ಜಿದಾರರು ಸಲ್ಲಿಸಿರುವ ಅರ್ಜಿಯ ವಿಚಾರಣೆಯು ನ್ಯಾಯಾಲಯದ ಸಭಾಂಗಣದಲ್ಲಿ **ದಿನಾಂಕ : 29-11-2021 ರಂದು ಬೆಳಿಗ್ಗೆ 11-00 ಗಂಟೆಗೆ** ನಿಗದಿಯಿದ್ದು, ಆಕ್ಷೇಪಣೆದಾರರಿದ್ದಲ್ಲಿ ಅವರು ಕೋವಿಡ್-19 ರ ನಿಯಮಗಳನ್ನು ಅನುಸರಿಸಿ ಖುದ್ದಾಗಿ ಅಥವಾ ವಕೀಲರ ಮೂಲಕ ಆಕ್ಷೇಪಣೆಗಳಿದ್ದಲ್ಲಿ ಸಲ್ಲಿಸತಕ್ಕದ್ದು. ತಪ್ಪಿದ್ದಲ್ಲಿ ಅರ್ಜಿದಾರರ ಪರ ನಿಯಮಾನುಸಾರವಾಗಿ ಆದೇಶಿಸಲಾಗುವುದು. ನ್ಯಾಯಾಲಯದ ಮೊಹರು ಹಾಗೂ ಸಹಿಯೊಂದಿಗೆ **ದಿನಾಂಕ : 10ನೇ ನವೆಂಬರ್ 2021** ರಂದು ನೀಡಲ್ಪಟ್ಟಿದೆ.

ನ್ಯಾಯಾಲಯದ ಆದೇಶದ ಮೇರೆಗೆ
**ಸಹಿ/- ಸಿ.ಜಿ. ರಾಜಶೇಖರ್** ವಕೀಲರು, ದಾವಣಗೆರೆ.
ಸಹಿ/- **ಶಿರಸ್ತೇದಾರರು,** ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಹಾಗೂ ಸಿ.ಜೆ.ಎಂ. ದಾವಣಗೆರೆ.

# ಹರಿಹರದಲ್ಲಿ ಇಬ್ಬರು ಬೈಕ್ ಕಳ್ಳರ ಬಂಧನ : 10 ಬೈಕ್‌ಗಳ ವಶ



ದಾವಣಗೆರೆ, ನ.10- ದಾವಣಗೆರೆ ಜಿಲ್ಲೆ ಸೇರಿದಂತೆ ವಿವಿಧ ಜಿಲ್ಲೆಗಳಲ್ಲಿ ಬೈಕ್‌ಗಳನ್ನು ಕಳ್ಳತನ ಮಾಡುತ್ತಿದ್ದ ಇಬ್ಬರನ್ನು ಬಂಧಿಸಿರುವ ಪೊಲೀಸರು, 5.10 ಲಕ್ಷ ಮೌಲ್ಯದ 10 ಬೈಕ್‌ಗಳನ್ನು ವಶಪಡಿಸಿಕೊಂಡಿದ್ದಾರೆ.

ನಗರ ಉಪ-ವಿಭಾಗದ ಪೊಲೀಸ್ ಉಪಾಧೀಕ್ಷಕ ನರಸಿಂಹ ವಿ. ತಾಮ್ರಧ್ವಜ ಮಾರ್ಗದರ್ಶನದಲ್ಲಿ ಬಡಾವಣೆ ಪೊಲೀಸ್ ಠಾಣೆಯ ಪೊಲೀಸ್ ನಿರೀಕ್ಷಕ ಸುರೇಶ್ ಸಗರಿ ನೇತೃತ್ವದಲ್ಲಿ ಪಿಎಸ್ ಐಗಳಾದ ಬಿ.ಎಸ್. ಅರವಿಂದ, ಎಸ್.ಬಿ. ಚಿದಾನಂದಪ್ಪ, ಎಆರ್‌ಎಸ್‌ಐ ಕುಬೇಂದ್ರಪ್ಪ ಮತ್ತು ಸಿಬ್ಬಂದಿಗಳಾದ ಹರೀಶ್, ಸಿದ್ದೇಶ್, ಅರುಣಕುಮಾರ, ಹರೀಶ್ ಕೆ.ಬಿ, ಸೈಯದ್ ಅಲಿ, ಹನುಮಂತಪ್ಪ, ಅರ್ಜುನ್ ರಾಯಲ್, ವಿಶಾಲಾಕ್ಷಿ ಒಳಗೊಂಡ ತಂಡವು ಬೈಕ್ ಕಳ್ಳತನ ಪ್ರಕರಣವನ್ನು ಬೇಧಿಸಿದೆ.

ಬಡಾವಣೆ ಪೊಲೀಸ್ ಠಾಣಾ ವ್ಯಾಪ್ತಿಯ 2, ವಿದ್ಯಾನಗರ ಪೊಲೀಸ್ ಠಾಣೆಯ 1, ಆರ್‌ಎಂಸಿ ಪೊಲೀಸ್ ಠಾಣೆ 1, ಹರಿಹರ ನಗರ ಪೊಲೀಸ್ ಠಾಣೆಯ 2, ಹರಿಹರ ಗ್ರಾಮಾಂತರ ಪೊಲೀಸ್ ಠಾಣೆಯ 1 ಬೈಕ್ ಕಳವು ಪ್ರಕರಣ ಸೇರಿದಂತೆ ಹಾವೇರಿ ಜಿಲ್ಲೆಯ ರಾಣೇಬೆನ್ನೂರು ಷಹರ ಪೊಲೀಸ್ ಠಾಣೆಯ 2, ವಿಜಯನಗರ ಜಿಲ್ಲೆಯ ಅರಸೀಕೆರೆ ಪೊಲೀಸ್ ಠಾಣೆ 1 ಬೈಕ್ ಕಳವು ಪ್ರಕರಣ ಸೇರಿ ಒಟ್ಟು 10 ಬೈಕ್‌ಗಳನ್ನು ವಶಪಡಿಸಿಕೊಂಡಿದ್ದಾರೆ.

# ಜಯ ಮೃತ್ಯುಂಜಯ ಶ್ರೀಗಳಿಂದ ಬಿ. ವೀರಣ್ಣ ಕುಟುಂಬಕ್ಕೆ ಸಾಂತ್ವನ



ದಾವಣಗೆರೆ, ನ.10- ಜಿಲ್ಲಾ ವಾಲ್ಮೀಕಿ ನಾಯಕ ಸಮಾಜದ ಅಧ್ಯಕ್ಷರೂ, ನಾಯಕ ವಿದ್ಯಾರ್ಥಿ ನಿಲಯದ ಅಧ್ಯಕ್ಷರೂ ಆದ ಬಿ. ವೀರಣ್ಣ ಅವರ ಮಾತೃಶ್ರೀ ಅವರು ಈಚೆಗೆ ನಿಧನರಾದ ಹಿನ್ನೆಲೆಯಲ್ಲಿ ಕೂಡಲ ಸಂಗಮದ ಪಂಚಮಸಾಲಿ ಪೀಠದ ಜಗದ್ಗುರು ಶ್ರೀ ಜಯ ಮೃತ್ಯುಂಜಯ ಸ್ವಾಮೀಜಿ ವೀರಣ್ಣ ಅವರ ನಿವಾಸಕ್ಕೆ ಇಂದು ಸಂಜೆ ಭೇಟಿ ನೀಡಿ, ಅವರ ಕುಟುಂಬಕ್ಕೆ ಸಾಂತ್ವನ ಹೇಳುವ ಮೂಲಕ ಧೈರ್ಯ ತುಂಬಿದರು. ಇದೇ ಸಂದರ್ಭದಲ್ಲಿ ಬಿ. ವೀರಣ್ಣ ಮತ್ತು ನಗರ ಪಾಲಿಕೆ ಸ್ಥಾಯಿ ಸಮಿತಿ ಮಾಜಿ ಅಧ್ಯಕ್ಷರಾದ ಶ್ರೀಮತಿ ಲಕ್ಷ್ಮಿದೇವಿ ಹಾಗೂ ಕುಟುಂಬ ವರ್ಗದವರು ಸ್ವಾಮೀಜಿಯವರನ್ನು ಸನ್ಮಾನಿಸಿ, ಗೌರವಿಸಿದರು.

**ಬೇಕಾಗಿದ್ದಾರೆ**

Diploma in Hardware Networking / Software ಆದವರು ಬೇಕಾಗಿದ್ದಾರೆ.
ಅನುಭವವುಳ್ಳ ಅಭ್ಯರ್ಥಿಗಳಿಗೆ ಹೆಚ್ಚಿನ ಆದ್ಯತೆ.

ಎ.ಕೆ. ಫಾರ್ಮದಲ್ಲಿ ಸ್ಟಾಕ್ ತೆಗೆಯಲು PUC / Diploma / Degree ಆದ ಉತ್ಸಾಹಿ ಯುವಕರು ಬೇಕಾಗಿದ್ದಾರೆ.
ಆಯ್ಕೆ ಆದ ಅಭ್ಯರ್ಥಿಗಳಿಗೆ, ಆಕರ್ಷಕ ವೇತನ, PF, ESI ಮತ್ತು Gratuity ಸೌಲಭ್ಯಗಳು ಹಾಗೂ ಕಾರ್ಪೊರೇಟ್ ತರಬೇತಿ ಇರುತ್ತದೆ.

**ಸಂಪರ್ಕಿಸಿ : ಎ.ಕೆ. ಫಾರ್ಮ**
**ತರಳಬಾಳು ಶಾಲೆ ಎದುರು, ಹದಡಿ ರಸ್ತೆ, ದಾವಣಗೆರೆ.**

**ದಾವಣಗೆರೆ ಶ್ರೀ ದಾನೇಶ್ವರಿ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್.ಲಿ**
# 619/1, ಮೊದನೇ ಮಹಡಿ, ಚರ್ಚ್ ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ-7. ಫೋ. : 08192 232354

**2020-21ನೇ ಸಾಲಿನ ವಾರ್ಷಿಕ ಮಹಾಸಭೆ ಆಹ್ವಾನ ಪತ್ರಿಕೆ**

**ಮಾನ್ಯ ಸಹಕಾರಿ ಸದಸ್ಯರೇ,**

ನಮ್ಮ ಸಹಕಾರಿಯ 2020-21ನೇ ಸಾಲಿನ 7ನೇ ವಾರ್ಷಿಕ ಮಹಾಸಭೆಯನ್ನು ದಿನಾಂಕ : 13.11.2021ರ ಶನಿವಾರ ಮಧ್ಯಾಹ್ನ 12.00 ಗಂಟೆಗೆ ಶ್ರೀ ಬಸವೇಶ್ವರ ಸೇವಾ ಸಂಘದ ಸಭಾಂಗಣ, ದೊಡ್ಡಪೇಟೆ, ದಾವಣಗೆರೆ (ಶ್ರೀ ಬಸವೇಶ್ವರ ದೇವಸ್ಥಾನ) ಇಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಕೆ.ಎಂ. ರವಿಶಂಕರ್ ಇವರ ಅಧ್ಯಕ್ಷತೆಯಲ್ಲಿ ಕರೆಯಲಾಗಿದೆ. ಮಾನ್ಯ ಸದಸ್ಯರು ಸಕಾಲಕ್ಕೆ ಆಗಮಿಸಿ, ಸಭೆಯನ್ನು ಯಶಸ್ವಿಗೊಳಿಸಬೇಕಾಗಿ ಕೋರಲಾಗಿದೆ.

ಕಾರ್ಯಕಾರಿ ಮಂಡಳಿಯ ಆದೇಶದ ಮೇರೆಗೆ
**ಶ್ರೀಮತಿ ಕೆ.ಎಸ್. ಜ್ಯೋತಿ,** ಮುಖ್ಯ ಕಾರ್ಯನಿರ್ವಾಹಕರು

**ವಿಶೇಷ ಸೂಚನೆ ; 1) ಈಗಾಗಲೇ ವಾರ್ಷಿಕ ಮಹಾಸಭೆಯ ಆಹ್ವಾನ ಪತ್ರಿಕೆಯನ್ನು ಅಂಚೆ ಮೂಲಕ ಕಳುಹಿಸಲಾಗಿದ್ದು, ತಲುಪದೇ ಇರುವ ಸದಸ್ಯರು ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ, ಮಹಾಸಭೆಗೆ ಆಗಮಿಸಬೇಕಾಗಿ ವಿನಂತಿ. 2) ಮಹಾಸಭೆಯಲ್ಲಿ ಮಾಸ್ಕ್ ಧರಿಸಿ, ಸ್ಯಾನಿಟೈಸರ್ ಬಳಸಿ, ಸಾಮಾಜಿಕ ಅಂತರ ಕಾಯ್ದುಕೊಳ್ಳಬೇಕಾಗಿ ವಿನಂತಿ.**

**ದೈವಜ್ಞ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ.,**
ವಿಜಯಲಕ್ಷ್ಮಿ ರಸ್ತೆ, ದಾವಣಗೆರೆ.

**24ನೇ ವಾರ್ಷಿಕ ಮಹಾಸಭೆಯ ನೋಟಿಸು**

**ಸನ್ಮಾನ್ಯ ಸಂಘದ ಸದಸ್ಯರುಗಳೇ,**

ದಿನಾಂಕ : 27.11.2021ರ ಶನಿವಾರ ಬೆಳಿಗ್ಗೆ 11.30 ಗಂಟೆಗೆ ಪಿ.ಬಿ. ರಸ್ತೆಯಲ್ಲಿರುವ ದೈವಜ್ಞ ಕಲ್ಯಾಣ ಮಂಟಪದಲ್ಲಿ ಸಂಘದ 24ನೇ ವಾರ್ಷಿಕ ಮಹಾಸಭೆಯನ್ನು ಆಯೋಜಿಸಲಾಗಿದೆ. ಸಂಘವು ಪ್ರತಿ ವರ್ಷದಂತೆ ಎಲ್ಲಾ ಸದಸ್ಯರ ಸಹಕಾರದೊಂದಿಗೆ ಉತ್ತಮ ಲಾಭವನ್ನು ಗಳಿಸುತ್ತಾ, ಅಭಿವೃದ್ಧಿಯ ಪಥದಲ್ಲಿ ಸಾಗುತ್ತಿದೆ. ದಿನಾಂಕ : 31.03.2021ಕ್ಕೆ ಅಂತ್ಯವಾಗುವ ವರ್ಷಕ್ಕೆ ಹೆಚ್ಚಿನ ಲಾಭವನ್ನು ಗಳಿಸಿದ್ದು, ಎಲ್ಲಾ ಷೇರುದಾರರಿಗೆ ಶೇ. 16 ಡಿವಿಡೆಂಡನ್ನು ಆಡಳಿತ ಮಂಡಳಿಯು ಘೋಷಿಸಿದೆ. ಸದರಿ ದಿನಾಂಕದಂದು ತಾವೆಲ್ಲರೂ ಸರಿಯಾದ ಸಮಯಕ್ಕೆ ಆಗಮಿಸಿ, ಸಭೆಯನ್ನು ಯಶಸ್ವಿಗೊಳಿಸಬೇಕಾಗಿ ವಿನಂತಿ. ಸರ್ವ ಸದಸ್ಯರಿಗೂ ಮಹಾಸಭೆಯ ನೋಟಿಸನ್ನು ಅಂಚೆಯ ಮೂಲಕ ಕಳುಹಿಸಲು ವ್ಯವಸ್ಥೆಯನ್ನು ಮಾಡಲಾಗಿದೆ.

**ಪ್ರಶಾಂತ ವಿ. ವೆರ್ಣೇಕರ್** ಅಧ್ಯಕ್ಷರು
**ರಾಜೀವ್ ವಿ. ವೆರ್ಣೇಕರ್** ಉಪಾಧ್ಯಕ್ಷರು
**ಪ್ರವೀಣ ರಾಯ್ಕರ್** ಕಾರ್ಯದರ್ಶಿ

# ಡಾಂಬರೀಕರಣಕ್ಕೆ ಆಗ್ರಹಿಸಿ ರಸ್ತೆ ತಡೆದು ಪ್ರತಿಭಟನೆ




ಹರಪನಹಳ್ಳಿ, ನ.10- ಪಟ್ಟಣದ ಆಚಾರ್ಸ್ ಬಡಾವಣೆಯಲ್ಲಿ ರಸ್ತೆಗಳ ಡಾಂಬರೀಕರಣಕ್ಕಾಗಿ ಆಗ್ರಹಿಸಿ, ಅಲ್ಲಿಯ ನಿವಾಸಿಗಳು ಗಣೇಶ ದೇವಸ್ಥಾನದ ಎದುರಿಗಿನ ರಸ್ತೆ ತಡೆದು ಪ್ರತಿಭಟನೆ ನಡೆಸಿ, ತಹಶೀಲ್ದಾರ್ ಹಾಗೂ ಪುರಸಭಾ ಸದಸ್ಯ ಎಚ್.ಎಂ. ಅಶೋಕ್ ಅವರಿಗೆ ಮನವಿ ಪತ್ರ ಸಲ್ಲಿಸಿದರು.

ಈ ವೇಳೆ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ನಿಕಟ ಪೂರ್ವ ಅಧ್ಯಕ್ಷ ಡಿ. ರಾಮನಮಲಿ ಮಾತನಾಡಿ, ಆಚಾರ್ ಬಡಾವಣೆಯ ಮುಖ್ಯ ರಸ್ತೆಗಳು, ಅಡ್ಡ ರಸ್ತೆಗಳು ತುಂಬಾ ಹಾಳಾಗಿವೆ. ಮಳೆಗಾಲದಲ್ಲಿ ವಾಹನ ಸವಾರರು ರಸ್ತೆಯಲ್ಲಿ ಸಂಚಾರ ಮಾಡಲು ಪರದಾಡುವ ಪರಿಸ್ಥಿತಿ ಉಂಟಾಗಿದೆ. ಗುಂಡಿ ಬಿದ್ದ ರಸ್ತೆಗಳಲ್ಲಿ ಸಂಚಾರ ಕಷ್ಟದಾಯಕವಾಗಿದ್ದು, ರಸ್ತೆಗೆ ಡಾಂಬರೀಕರಣ ಮಾಡಬೇಕು ಎಂದು ಒತ್ತಾಯಿಸಿದರು.

ಗುತ್ತಿಗೆದಾರರಾದ ವೀರಭದ್ರಯ್ಯ (ಬದ್ರಿ), ಉಸ್ಮಾನ್, ಕೆ.ಎಚ್.ಎಂ.ರುದ್ರಮುನಿಸ್ವಾಮಿ ಮಾತನಾಡಿ, ಪ್ರತಿಷ್ಠಿತ ಬಡಾವಣೆ ಎಂದು ಕರೆಯುವ ಈ ಬಡಾವಣೆಯತ್ತ ಪುರಸಭೆಯವರು ಗಮನ ಹರಿಸದೇ ಇರುವುದು ಶೋಚನೀಯ ಸಂಗತಿಯಾಗಿದೆ. ಇದು ಹಂದಿಗಳ ವಾಸ ಸ್ಥಾನವಾಗಿದ್ದು, ರೋಗಗಳು ಹರಡುವ ಸಾಧ್ಯತೆ ಇದೆ. ತುರ್ತಾಗಿ ಆಚಾರ್ ಬಡಾವಣೆಯ ರಸ್ತೆಗಳನ್ನು ಡಾಂಬರೀಕರಣಗೊಳಿಸಬೇಕು. ಹಂದಿ ಹಿಡಿದು ಊರ ಹೊರ ಸಾಗಿಸಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಜಿ. ಪವಾರ್, ಪ್ರಶಾಂತ್, ಪಿ.ಟಿ. ಮಂಜುನಾಥ್, ಪುಂಡಿ ಪಂಪಣ್ಣ ಇನ್ನಿತರರು ಪಾಲ್ಗೊಂಡಿದ್ದರು.

# ಮದುವೆ ಮನೆಯಲ್ಲಿ ಕ್ಯಾಮರಾ ಉಪಕರಣಗಳ ಕಳವು

ದಾವಣಗೆರೆ, ನ.10- ತಮ್ಮ ಅಳಿಯನ ಮದುವೆ ಸಮಾರಂಭದ ವೇಳೆ ಮದುವೆ ಮಂಟಪದ ಮದುಮಗನ ಕೊಠಡಿಯಲ್ಲಿಟ್ಟಿದ್ದ ಫೋಟೋಗ್ರಾಫರ್ ಓರ್ವರ ಲಕ್ಷಕ್ಕೂ ಅಧಿಕ ಮೌಲ್ಯದ ಕ್ಯಾಮರಾ ಮತ್ತು ಫೋಟೋಗೆ ಸಂಬಂಧಿಸಿದ ಉಪಕರಣಗಳುಳ್ಳ ಬ್ಯಾಗ್ ಸಹಿತ ಕಳವು ಮಾಡಿರುವ ಘಟನೆ ಇಲ್ಲಿನ ಬಸವನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ.

ಫೋಟೋಗ್ರಾಫರ್ ಎ.ಎಸ್. ಗಣೇಶ ಎಂಬಾತ ಇದೇ ದಿನಾಂಕ 1 ರಂದು ಶಿವ ಪಾರ್ವತಿ ಕಲ್ಯಾಣ ಮಂಟಪದಲ್ಲಿ ಅಳಿಯ ಎಸ್.ವಿ. ವೀರೇಶ್ ಅವರ ಮದುವೆ ಸಮಾರಂಭದ ನಿಮಿತ್ತ ಬೆಳಿಗ್ಗೆ ಒಂದು ಫೋಟೋ ಕ್ಯಾಮರಾ ಮತ್ತು ವಿಡಿಯೋ ಕ್ಯಾಮರಾವನ್ನು ಕಾರ್ಯಕ್ರಮಕ್ಕೆ ಬಳಸಿಕೊಂಡಿದ್ದು, ಇನ್ನೊಂದು ಫೋಟೋ ಕ್ಯಾಮರಾವನ್ನು ಮದುಮಗನಿಗೆ ನೀಡಿದ್ದ ವರನ ರೂಂನಲ್ಲಿ ಬಟ್ಟೆ ಬ್ಯಾಗ್‌ಗಳ ಜೊತೆಯಲ್ಲಿ ಇಟ್ಟಿದ್ದರು.


ಮಧ್ಯಾಹ್ನ ನೋಡಿದಾಗ ಕೊಠಡಿಯಲ್ಲಿಟ್ಟಿದ್ದ 1 ಲಕ್ಷದ 25 ಸಾವಿರ ಮೌಲ್ಯದ ಕ್ಯಾಮರಾ, ಕಿಟ್ ಲೆನ್ಸ್, ಬ್ಯಾಟರಿ ಮತ್ತು ಶೆಲ್ ಚಾರ್ಜರ್, ಕ್ಯಾಮರಾ ಉಪಕರಣಗಳಿದ್ದ ಬ್ಯಾಗ್ ಕಳವು ಮಾಡಲಾಗಿದೆ ಎಂದು ಪೊಲೀಸರಿಗೆ ನೀಡಿರುವ ದೂರಿನಲ್ಲಿ ವಿವರಿಸಲಾಗಿದೆ.

# ಮನೆಗೆ ಕನ್ನ : ಚಿನ್ನಾಭರಣ, ನಗದು ಕಳ್ಳತನ

ದಾವಣಗೆರೆ, ನ.10- ಮನೆಯ ಬೀಗ ಮುರಿದು ಒಳನುಗ್ಗಿರುವ ಕಳ್ಳರು, ಸುಮಾರು 3.14 ಲಕ್ಷ ಮೌಲ್ಯದ ಚಿನ್ನಾಭರಣ, ನಗದು ದೋಚಿರುವ ಘಟನೆ ಸಂತೇಬೆನ್ನೂರು ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ.

ಚನ್ನಗಿರಿ ತಾಲ್ಲೂಕು ಕಾಶೀಪುರ ಗ್ರಾಮದ ಹಾಲೇಶನಾಯ್ಕ ಎಂಬುವರು ಮನೆಗೆ ಬೀಗ ಹಾಕಿಕೊಂಡು ಇದೇ ದಿನಾಂಕ 8ರ ಸಂಜೆ ಅಡಿಕೆ ಹೊಲದ ಪಕ್ಕದಲ್ಲಿರುವ ಖೇಣಿ ಮನೆಗೆ ಹೋಗಿದ್ದ ಸಂದರ್ಭದಲ್ಲಿ ಈ ಘಟನೆ ನಡೆದಿದೆ.

# ಎಂ.ಎಂ. ವಿದ್ಯಾಲಯದ ಇಬ್ಬರು ವಿದ್ಯಾರ್ಥಿಗಳು 'ಶ್ರೇಷ್ಠ ವಿಜ್ಞಾನಿಗಳು'




ದಾವಣಗೆರೆ, ನ.10- ಅಮೆರಿಕಾದ ಸ್ಟ್ಯಾನ್ ಫೋರ್ಡ್ ವಿಶ್ವವಿದ್ಯಾನಿಲಯ ಪ್ರಕಟಿಸಿರುವ ವಿಶ್ವದ ಶೇ. 2 ಶ್ರೇಷ್ಠ ವಿಜ್ಞಾನಿಗಳ ಪಟ್ಟಿಯಲ್ಲಿ ನಗರದ ಎಂ.ಎಂ. ಶಿಕ್ಷಣ ಮಹಾವಿದ್ಯಾಲಯದ ಇಬ್ಬರು ಹಿರಿಯ ವಿದ್ಯಾರ್ಥಿಗಳು ಸ್ಥಾನ ಪಡೆದಿದ್ದಾರೆ.

ಎಲ್ಸೆವಿಯರ್ ಸಂಸ್ಥೆಯ ಸಹಯೋಗದಲ್ಲಿ ಸ್ಟ್ಯಾನ್‌ಫೋರ್ಡ್ ವಿಶ್ವವಿದ್ಯಾಲಯದ ಜೆರೋಮಿನ್ ಬಾಸ್, ಕೆವಿನ್ ಬೋಯಾಕ ಮತ್ತು ಜಾನ್ ಪಿ.ವಿ. ಇವೋನ್ನಿಡಿಸ್ ಅವರನ್ನೊಳಗೊಂಡ ಸಂಶೋಧನಾ ತಂಡ ವಿಶ್ವದ ಶೇ. 2 ವಿಜ್ಞಾನಿಗಳ ಮಾಹಿತಿ ಪಟ್ಟಿ ಬಿಡುಗಡೆ ಮಾಡಿದ್ದಾರೆ.

ಬೆಳಗಾವಿಯ ರಾಣಿ ಚೆನ್ನಮ್ಮ ವಿಶ್ವವಿದ್ಯಾನಿಲಯದ ರಸಾಯನಶಾಸ್ತ್ರ ವಿಭಾಗದ ಪ್ರಾಧ್ಯಾಪಕ ಡಾ. ಮಂಜಣ್ಣ ಅವರು ಅಂತರರಾಷ್ಟ್ರೀಯ ನಿಯತಕಾಲಿಕೆಗಳಲ್ಲಿ ಪ್ರಕಟಿಸಿದ ಸಂಶೋಧನಾ ಲೇಖನ, ಪಡೆದಿರುವ ಪೇಟೆಂಟ್, ಸಂಶೋಧನಾ ವಿದ್ಯಾರ್ಥಿಗಳಿಗೆ ನೀಡಿದ ಮಾರ್ಗದರ್ಶನ, ರಾಷ್ಟ್ರೀಯ ಮಟ್ಟದ ಸಮ್ಮೇಳನ ಮತ್ತು ಸೆಮಿನಾರ್‌ಗಳಲ್ಲಿ ವಿಷಯ ತಜ್ಞರಾಗಿ ಸಕ್ರಿಯವಾಗಿ ಭಾಗವಹಿಸಿದ್ದನ್ನು ಪರಿಗಣಿಸಿ ಇವರ ಹೆಸರನ್ನು ವಿಶ್ವದ ವಿಜ್ಞಾನಿಗಳ ಪಟ್ಟಿಯಲ್ಲಿ ಸೇರಿಸಲಾಗಿದೆ. ಮಂಜಣ್ಣ ಅವರು ಹೊಸದುರ್ಗ ತಾಲ್ಲೂಕಿನ ಹೆಚ್.ಜಿ. ಹಳ್ಳಿಯವರು.

ದಾವಣಗೆರೆ ವಿಶ್ವವಿದ್ಯಾಲಯದ ಗಣಿತ ವಿಭಾಗದ ಸಹ ಪ್ರಾಧ್ಯಾಪಕ ಬಿ.ಸಿ. ಪ್ರಸನ್ನಕುಮಾರ್ ಅವರು 15 ವರ್ಷಗಳಿಂದ ಕೈಗೊಂಡ ಬೋಧನೆ ಹಾಗೂ ಸಂಶೋಧನೆಯ ಫಲವಾಗಿ 150 ಲೇಖನಗಳು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ನಿಯತಕಾಲಿಕೆಗಳಲ್ಲಿ ಪ್ರಕಟವಾಗಿವೆ. ಇವರು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಸಮ್ಮೇಳನಗಳ ವಿಷಯ ಮಂಡನೆ ಗೋಷ್ಠಿಗಳನ್ನು ಭಾಗವಹಿಸಿದ್ದಾರೆ.

ಡಾ. ಮಂಜಣ್ಣ ಮತ್ತು ಪ್ರಸನ್ನ ಕುಮಾರ್ ಅವರುಗಳನ್ನು ಶ್ರೀ ತರಳಬಾಳು ಜಗದ್ಗುರು ವಿದ್ಯಾಸಂಸ್ಥೆಯ ಅಧ್ಯಕ್ಷರಾದ ಶ್ರೀ ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮೀಜಿ, ಶ್ರೀ ಡಾ. ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ, ಶ್ರೀ ಶಿವಪ್ರಕಾಶ ಶಿವಾಚಾರ್ಯ ಸ್ವಾಮೀಜಿ ಅಭಿನಂದಿಸಿದ್ದಾರೆ.

# ಬಿ.ಇಡಿ ಪರೀಕ್ಷೆ : ಎಂ.ಎಂ. ಶಿಕ್ಷಣ ವಿದ್ಯಾಲಯಕ್ಕೆ ಶೇ. 99 ಫಲಿತಾಂಶ

ದಾವಣಗೆರೆ, ನ.10- ದಾವಣಗೆರೆ ವಿಶ್ವವಿದ್ಯಾನಿಲಯದಿಂದ ನಡೆದ 2020-21ನೇ ಸಾಲಿನ ಬಿ.ಇಡಿ., ಪ್ರಥಮ, ದ್ವಿತೀಯ ಹಾಗೂ ತೃತೀಯ ಸೆಮಿಸ್ಟರ್ ಪರೀಕ್ಷೆಯಲ್ಲಿ ನಗರದ ಮಾಕನೂರು ಮಲ್ಲೇಶಪ್ಪ ಶಿಕ್ಷಣ ಮಹಾವಿದ್ಯಾಲಯಕ್ಕೆ ಶೇ. 99 ರಷ್ಟು ಫಲಿತಾಂಶ ಬಂದಿದೆ. ಪ್ರಥಮ ಸೆಮಿಸ್ಟರ್‌ನಲ್ಲಿ 93 ವಿದ್ಯಾರ್ಥಿಗಳು ಪರೀಕ್ಷೆಗೆ ಕುಳಿತಿದ್ದು, ಎಲ್ಲರೂ ಉತ್ತಮ ಅಂಕಗಳಿಸಿದ್ದಾರೆ. ಈ ಪೈಕಿ 600 ಅಂಕಗಳಿಗೆ ಕು. ಸ್ನೇಹ ಪಿ. ನಾಯ್ಕ 515 ಅಂಕಗಳಿಸಿದ್ದು, ತೃತೀಯ ಸೆಮಿಸ್ಟರ್‌ನಲ್ಲಿ 89 ವಿದ್ಯಾರ್ಥಿಗಳು ಪರೀಕ್ಷೆಗೆ ಕುಳಿತಿದ್ದು, ಕು. ಅನುಷ ಕೆ.ವಿ. ಅವರು 520 ಅಂಕ ಗಳಿಸಿ ಕಾಲೇಜಿಗೆ ಪ್ರಥಮ ಸ್ಥಾನ ಪಡೆದಿದ್ದಾರೆ. 89 ವಿದ್ಯಾರ್ಥಿಗಳು ಶೇಕಡ 80 ಕ್ಕಿಂತ ಹೆಚ್ಚು, 68 ವಿದ್ಯಾರ್ಥಿಗಳು ಶೇ. 75 ಕ್ಕಿಂತ ಹೆಚ್ಚು ಅಂಕ ಪಡೆದಿದ್ದಾರೆ.







## ವಾಣಿಜ್ಯೋದ್ದೇಶಕ್ಕಾಗಿ ಬಾಡಿಗೆಗೆ ಜಾಗ ಬೇಕಾಗಿದೆ

ಪ್ರತಿ ಕಾಲಂನ ಕನಿಷ್ಠ ಅಂತರ 16 ಅಡಿ ಅಗಲ ಇರುವ ನೆಲ ಅಂತಸ್ತು 4000 - 5000 ಅಡಿ ನೆಲ ಮತ್ತು 1ನೇ ಮಹಡಿ, ಲಿಫ್ಟ್ ವ್ಯವಸ್ಥೆ, 150 KV ಟ್ರಾನ್ಸ್‌ಫಾರ್ಮರ್ ಹಾಗೂ ಕನಿಷ್ಠ 40 ಅಡಿ ಮುಂಭಾಗ ಆವರಣವಿರುವ ಜಾಗವು ಬೇಕಾಗಿದೆ.

ಸ್ಥಳ: ಎಂಸಿಸಿ 'ಎ' ಬ್ಲಾಕ್/ಎಂಸಿಸಿ 'ಬಿ' ಬ್ಲಾಕ್/ಪಿ.ಜೆ. ಬಡಾವಣೆ

ಆಸ್ತಿ ಮಾಲೀಕರು ನೇರವಾಗಿ ಸಂಪರ್ಕಿಸಿ :

ಮೊ : 78990 55440


# ಗ್ರಾಮಾಂತರದಲ್ಲಿ ವಿದ್ಯುತ್ ವ್ಯತ್ಯಯ

66/11 ಕೆ.ವಿ ಕಾಡಜ್ಜಿ ವಿದ್ಯುತ್ ವಿತರಣಾ ಕೇಂದ್ರದ ಎಫ್-4 ಶ್ರೀರಾಮ್ ಮಾರ್ಗ ದಲ್ಲಿ ಮಳೆ ಗಾಳಿಗೆ ಶಿಥಿಲಗೊಂಡ ಕಂಬಗಳನ್ನು ಬದಲಾಯಿಸಲು, ಇಂದು ಬೆಳಿಗ್ಗೆ 10 ರಿಂದ ಸಂಜೆ 5 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ. ಎಫ್-4 ಶ್ರೀರಾಮ್ ಮಾರ್ಗದ ಗ್ರಾಮಗಳಾದ ಕಾಡಜ್ಜಿ, ನಾಗರಕಟ್ಟೆ, ರಾಂಪುರ, ಬಸವನಾಳ್, ಬಸವನಾಳ್ ಗೊಲ್ಲರಹಟ್ಟಿ, ಬೇತೂರು, ಪುಟಗನಾಳ್ ಮತ್ತು ರೆಡ್ಡಿ ಕ್ಯಾಂಪ್ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.


# ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಹಗೇದಿಬ್ಬ ಸರ್ಕಲ್, ಗಾಂಧಿನಗರ, ಅಂಬೇಡ್ಕರ್ ಸರ್ಕಲ್, ಮಹಾರಾಜ ಪೇಟೆ, ಬಸವರಾಜ ಪೇಟೆ, ಚೌಕಿಪೇಟೆ, ವಿಜಯಲಕ್ಷ್ಮಿ ರಸ್ತೆ, ದೊಡ್ಡಪೇಟೆ, ಕಾಳಿಕಾದೇವಿ ರಸ್ತೆ, ಎಸ್‌ಕೆಪಿ ರಸ್ತೆ, ಹಳೇಪೇಟೆ ವೀರಭದ್ರೇಶ್ವರ ದೇವಸ್ಥಾನ ಬಳಿ ಇಂದು ಬೆಳಿಗ್ಗೆ 10 ರಿಂದ ಸಂಜೆ 5 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

# ಸೊಕ್ಕೆ : ಇಂದು ವಿದ್ಯುತ್ ವ್ಯತ್ಯಯ

ಜಗಳೂರು ಕೇಂದ್ರದ ವ್ಯಾಪ್ತಿಯಲ್ಲಿ ಮತ್ತು ಸೊಕ್ಕೆ ಕೇಂದ್ರದ ವ್ಯಾಪ್ತಿಯಲ್ಲಿ ಬರುವ ನೀರಾವರಿ ಪಂಪ್‌ಸೆಟ್ ಮಾರ್ಗಗಳಿಗೆ ಹಾಗೂ ಎಲ್ಲಾ ಗ್ರಾಮಗಳ ಎನ್.ಜೆ.ವೈ ಮಾರ್ಗಗಳಿಗೆ ಇಂದು ಬೆಳಿಗ್ಗೆ 10 ರಿಂದ ಸಂಜೆ 6 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

## 4ನೇ ವರ್ಷದ ಪುಣ್ಯಸ್ಮರಣೆ



ಜನನ : 1929

ನಿಧನ : 11-11-2017

## ಡಾ|| ಎ. ಕೆಂಚಪ್ಪ

ಹಿರಿಯ ವೈದ್ಯರು, ರವಿ ನರ್ಸಿಂಗ್ ಹೋಮ್, ದಾವಣಗೆರೆ.

ನೀವು ನಮ್ಮನ್ನಗಲಿ ಇಂದಿಗೆ ನಾಲ್ಕು ವರ್ಷವಾಯಿತು.
ಸದಾ ನಿಮ್ಮ ಸ್ಮರಣೆಯಲ್ಲಿ,
ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿರುವ,

✦ ಶ್ರೀಮತಿ ಮತ್ತು ಡಾ|| ಕೆ. ಶ್ರೀನಿವಾಸರೆಡ್ಡಿ
✦ ಶ್ರೀಮತಿ ಮತ್ತು ಶ್ರೀ ಕೆ. ರಾಜಗೋಪಾಲರೆಡ್ಡಿ
✦ ಶ್ರೀಮತಿ ಮತ್ತು ಡಾ|| ಕೆ. ರವಿಕುಮಾರ್
✦ ಶ್ರೀಮತಿ ಮತ್ತು ಶ್ರೀ ಕೆ. ಶಶಿಧರ್
✦ ಶ್ರೀಮತಿ ಸುಜಾತ, ಡಾ|| ಡಿ.ಬಿ. ಧರ್ಮರೆಡ್ಡಿ
ಮತ್ತು ಮೊಮ್ಮಕ್ಕಳು
✦ ರವಿ ನರ್ಸಿಂಗ್ ಹೋಂ ✦ ನಂದಿ ಇಂಡಸ್ಟ್ರೀಸ್ ✦ ನಂದಿಗಾವಿ ಟ್ರೇಡರ್ಸ್
✦ ಅಕ್ಕೇರ ವಂಶಸ್ಥರು ಹಾಗೂ ಬಂಧು-ಮಿತ್ರರು.






JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte